
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಏಪ್ರಿಲ್ 2022 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 7
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | April 2022 | Monthly**




A Journal of Karnataka Rajya Madhyamika Shikshaka Sangha (R.)

# ವಿದ್ಯಾರ್ಥಿಗಳಲ್ಲಿ ನೈತಿಕ ಶಿಕ್ಷಣ ಏಕೆ? ಹೇಗೆ?

ಇಚಿದಿನ ಮಕ್ಕಳೇ ನಾಳಿನ ಪ್ರಜೆಗಳು. ದೇಶವನ್ನು ಮುನ್ನಡೆಸುವ ಯುವನೇತಾರರು. ಅಂತಹ ಮಕ್ಕಳಿಗೆ ಜೀವನದಲ್ಲಿ ಹೇಗಿದ್ದರೆ ಮನೆಗೆ, ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ಒಳಿತು ಎನ್ನುವ ಶಿಕ್ಷಣವನ್ನು ಬಾಲ್ಯದಲ್ಲಿಯೇ ನೀಡಬೇಕಾದುದು ಶಿಕ್ಷಕರಾದ ನಮ್ಮ ನಿಮ್ಮೆಲ್ಲರ ಕರ್ತವ್ಯವಲ್ಲವೇ? ಹಿಂದಿನ ಕಾಲದಲ್ಲಾದರೇ ಮಹಿಳೆ ಗರ್ಭವತಿಯಾದರೆ ಸಾಕು, ಹಿರಿಯರು ನೀಡುವ ಹಿತನುಡಿಗಳನ್ನು ಮತ್ತು ಕಥೆಗಳನ್ನು ಗರ್ಭದಲ್ಲಿರುವ ಮಕ್ಕಳು ಸಹ ಕೇಳುತ್ತಿದ್ದರೆಂಬುದಕ್ಕೆ ಅಭಿಮನ್ಯುವಿನ ಕಥೆಯೇ ಉದಾಹರಣೆಯಲ್ಲವೇ? ಆದರೆ ಇಂದು ಹೆಚ್ಚಿನ ಮಹಿಳೆಯರು ಉದ್ಯೋಗಸ್ಥರಾಗಿರುವುದರಿಂದ ಹಿರಿಯರ ಹಿತನುಡಿಗಳನ್ನು ಕೇಳುವ, ಒಳ್ಳೆಯ ಕಥೆಗಳಿಗೆ ಕಿವಿಗೊಡುವ ಸಮಯವಾದರು ಎಲ್ಲಿ? ಇನ್ನು ಗರ್ಭಸ್ಥ ಶಿಶುವಿಗೆ ಒಳ್ಳೆಯ ಸಂಸ್ಕಾರ ದೊರೆಯುವುದು ದೂರದ ಮಾತಾಯಿತು.

ಹುಟ್ಟಿದ ಮಕ್ಕಳನ್ನು ಆರನೇ ತಿಂಗಳಿಗೆ ಮನೆಯಲ್ಲಿ ಬಿಟ್ಟು ಉದ್ಯೋಗಕ್ಕೆ ಹೊರಡುವ ತಾಯಿ ಮಕ್ಕಳಿಗೆ ನೈತಿಕ ಶಿಕ್ಷಣದ ಮುನ್ನುಡಿಯಿಡುವುದಾದರು ಹೇಗೆ? ಇನ್ನು ಶಾಲೆಗೆ ಸೇರಿದ ಮಕ್ಕಳಿಗೆ ನೈತಿಕ ಶಿಕ್ಷಣ ಕೊಡುವ ಜವಾಬ್ದಾರಿ ಗುರುಗಳ ಹೊಣೆಯೇ ಅಲ್ಲವೇ? ಪ್ರಾರಂಭದ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಆರಂಭದ ವರ್ಣಮಾಲೆಯನ್ನು ಹೇಳಕೊಡುವಾಗಲೇ ಒಂದೊಂದು ವರ್ಣಮಾಲೆಯ ಜೊತೆ ಒಂದೊಂದು ನೀತಿಯ ಕಥೆಗಳನ್ನು ಹೇಳಕೊಟ್ಟರೆ ಹೇಗೆ ಎಂಬುದರ ಬಗ್ಗೆ ಶಿಕ್ಷಕರು ಯೋಚಿಸುವುದು ಒಳತಲ್ಲವೇ?

ನೈತಿಕವಾಗಿ ಸದೃಢವಾಗಿದ್ದವರು ಮಾತ್ರ ಎಲ್ಲಾದರೂ ಆತ್ಮವಿಶ್ವಾಸದಿಂದ ಇರಬಲ್ಲರು. ಅಂತಹ ಆತ್ಮವಿಶ್ವಾಸದ ಜೀವನವನ್ನು ನಡೆಸುವ ರೀತಿಯನ್ನು ಕಲಿಸುವ ಜವಾಬ್ದಾರಿ ಶಿಕ್ಷಕರದ್ದಾಗಿದೆ. ಪ್ರತಿಯೊಂದು ಪಾಠಗಳಲ್ಲಿಯೂ ಏನಾದರೊಂದು ಮೌಲ್ಯವಿರುವಂತೆ ಪಠ್ಯಕ್ರಮ ತಯಾರಿಯಾಗಬೇಕಾಗಿರುವುದು ಅತ್ಯಂತ ಅವಶ್ಯಕ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ? ಎನ್ನುವಂತೆ ಮಕ್ಕಳು ಚಿಕ್ಕವರಾಗಿರುವಾಗಲೇ ಅವರಿಗೆ ಜೀವನದಲ್ಲಿ ನೈತಿಕತೆಯ ಅವಶ್ಯಕತೆಯನ್ನು ತಿಳಿಸುವುದು ಒಳಿತು. ಕೆಲವೊಂದು ಹಾಡುಗಳನ್ನು ಹೇಳಕೊಡುವುದರ ಜೊತೆಗೆ ಅವರಿಗೆ ನೈತಿಕತೆಯನ್ನು ಹೇಳಕೊಡಬಹುದಾಗಿದೆ. ಉದಾಹರಣೆಗೆ ಒಂದು ತಾಸು ಭಾಷಣ ಮಾಡಿದರೂ ಹೇಳಲಾಗದಂತಹ ಮೌಲ್ಯಗಳು ಈ ಒಂದು ಹಾಡಿಯಲ್ಲಿಯೇ ಇದೆ ಎಂದರೆ ತಪ್ಪಾಗಲಾರದು.

**ಬುದ್ಧಿ ಮಾತ ಕೇಳ ಓ ಮುದ್ದು ಮಕ್ಕಳೇ**
**ಜಾಣರಾಗಿ ಬಾಳ ನನ್ನ ಹೊನ್ನ ಹೂಗಳೇ**
**ಮಾತಲ್ಲಿ ಮಿತವಿರಲೇಬೇಕು ನಿಮ್ಮ**
**ನಡೆಯಲ್ಲಿ ಹಿತವಿರಲೇಬೇಕು**
**ನೀವು ಎಲ್ಲೇ ಇರಲಿ ನಾಳೆ ಹೇಗೆ ಇರಲಿ**
**ಜನ ಮೆಚ್ಚುವಂತೆ ನೀವಿರಬೇಕು ।ಬು।**

**ಹಿರಿಯರಲ್ಲಿ ಗೌರವವು ನಿಮಗಿರಬೇಕು**
**ಗುರುಗಳಲ್ಲಿ ಭಕ್ತಿ ಭಾವ ತುಂಬಿರಬೇಕು**
**ಯಾರಲ್ಲೂ ದ್ವೇಷ ಇರಬಾರದು**
**ಗೆಳೆಯರಲ್ಲಿ ಸ್ನೇಹ-ಪ್ರೇಮ ತುಂಬಿರಬೇಕು**
**ಬಡವರನ್ನು ಪ್ರೀತಿಸುವ ಗುಣವಿರಬೇಕು**
**ಯಾರಲ್ಲೂ ನೋವು ತರಬಾರದು**
**ಸುಳ್ಳು ನುಡಿ ಆಡದಿರಿ ಕೆಟ್ಟವರ ಸೇರದಿರಿ**
**ಬಾಳುವ ರೀತಿಯ ಕಲಿಯಿರಿ ।ಬು।**

ಹಿಂದಿನ ಕಾಲದಲ್ಲಾದರೆ ವಿದ್ಯಾರ್ಥಿಗಳು ಗುರುಕುಲಗಳಲ್ಲಿ ಗುರುಗಳನ್ನು ಅನುಸರಿಸಿ ಅನೇಕ ನೈತಿಕ ಮೌಲ್ಯಗಳನ್ನು ಕಲಿಯುತ್ತಿದ್ದರು. ಜನ್ಮ ನೀಡಿದ ತಂದೆ-ತಾಯಿಗಳಿಗೆ ಗೌರವ ನೀಡುತ್ತಾ ಅವರಿಂದಲೂ ಅನೇಕ ಮೌಲ್ಯಗಳನ್ನು ಕಲಿಯುತ್ತಿದ್ದರು. ಈಗ ಹಾಗೆ ಆಗುತ್ತಿಲ್ಲ. ವಿದ್ಯಾರ್ಥಿಗಳು ಗುರುಕುಲದಲ್ಲಿಯೂ ಇರುತ್ತಿಲ್ಲ. ಹೆತ್ತಿರುವ ಒಂದು ಮಗುವನ್ನು ಮಗುವೆಂದು ನೋಡದೇ ಗೆಳೆಯರಂತೆ ನೋಡಿಕೊಳ್ಳಬೇಕೆಂದು ಕಲಿತು ಮಕ್ಕಳಿಗೆ ತಂದೆ-ತಾಯಿಯೆಂಬ ಗೌರವವೂ ಇರದಂತೆ ನಾವಾಗಿಯೇ ಮಾಡಿಕೊಳ್ಳುತ್ತಿದ್ದೇವೆ. ಮಕ್ಕಳಿಗೆ ಅನೇಕ ಗೆಳೆಯ-ಗೆಳತಿಯರು ಸಿಗುತ್ತಾರೆ. ತಂದೆ-ತಾಯಿಯರು ಮಕ್ಕಳನ್ನು ಮಕ್ಕಳಂತೆ ನೋಡಿಕೊಂಡು ಅವರಿಗೆ ನೈತಿಕ ಮೌಲ್ಯಗಳನ್ನು ಹೇಳಕೊಡುವುದು ಅತ್ಯಂತ ಅವಶ್ಯಕವಲ್ಲವೇ? ಈ ಎಲ್ಲಾ ವಿಷಯಗಳ ಕಡೆ ಗಮನ ನೀಡಿ ಇಂದಿನ ಮಕ್ಕಳನ್ನು ನಾಳಿನ ಜವಾಬ್ದಾರಿಯುತ ಪ್ರಜೆಗಳನ್ನಾಗಿ ರೂಪಿಸೋಣವೇ?

ಸಂಪಾದಕ



ಯಸ್ಯ ನಾಸ್ತಿ ನಿಜಾ ಪ್ರಜ್ಞಾ
ಕೇವಲಂ ಯೋ ಬಹುಶ್ರುತಃ ।
ನ ಸ ಜಾನಾತಿ ಶಾಸ್ತ್ರಾರ್ಥಂ
ದರ್ವೀ ಸೂಪರ ಸಾನಿವ ॥

ಸುಮ್ಮನೆ ಬಹಳವಾಗಿ ಓದಿದ್ದರೂ ಯಾರಿಗೆ ಸ್ವಂತ ಬುದ್ಧಿಯಿಲ್ಲವೋ ಅವನು ಶಾಸ್ತ್ರಾರ್ಥವನ್ನು ತಿಳಿಯಲಾರ; ಸೌಟಿಗೆ ಅಡಿಗೆಯ ರುಚಿ ಹೇಗೆ ತಿಳಿದೀತು!


- ವೇದವ್ಯಾಸರು

## ಪರಿವಿಡಿ


- ಸಂಘ ಗಂಗೆಯ ಜನಕ 3
- ಕಾಶ್ಮೀರ ಫೈಲ್ಸ್ 4
- ಮಕ್ಕಳ ರಜಾ ದಿನಗಳು 5
- ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆಗೆ NEP-2020 ಹೇಳಿದ್ದೇನು? 6
- ಸ್ವಾತಂತ್ರ್ಯ ಹೋರಾಟ ಹಿನ್ನೋಟ, ಮುನ್ನೋಟ 7
- ರಾಷ್ಟ್ರೀಯ ಶಿಕ್ಷಣ ನೀತಿ 2020: ವಿಶ್ವಗುರುವಾಗುವತ್ತ ಭಾರತ 8
- ವಿದ್ಯಾರ್ಥಿ ಮಿತ್ರ 10
- ವಿವಿಧೆಡೆಗಳಲ್ಲಿ ನಡೆದ ಕಾರ್ಯಕ್ರಮ 11
- ಯುಗಾದಿ ದಿನದರ್ಶಿಕೆ ಬಿಡುಗಡೆ 12

# ಡಾಕ್ಟರ್ ಜೀ ಸ್ಮರಣೆ

# "ಸಂಘ-ಗಂಗೆ"ಯ ಜನಕ





**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ನಮ್ಮೀ ಭಾರತ ಭೂಮಿಯನ್ನು 'ರತ್ನಗರ್ಭಾ' ಎಂದು ಕರೆದಿದ್ದಾರೆ. ರತ್ನಗರ್ಭ ಎಂಬ ವಿಶೇಷಣ ಕೇವಲ ಭೂಮಿಯಾಳದಲ್ಲಿ ಸಿಗುವ ಬಂಗಾರ, ತಾಮ್ರ, ಕಬ್ಬಿಣ ಮುಂತಾದ ಖನಿಜಗಳಿಗಷ್ಟೇ ಸಲ್ಲುವುದಿಲ್ಲ. ಬದಲಿಗೆ ಈ ನಾಡಿನಲ್ಲಿ ಜನ್ಮತಳೆದ ಅಸಂಖ್ಯ ಸಾಧು-ಸಂತರು, ಸಮಾಜ ಸುಧಾರಕರು, ರಾಷ್ಟ್ರ ಜೀವನದ ವಿವಿಧ ಮುಖಗಳಲ್ಲಿ ದೇಶೋದ್ಧಾರಕ್ಕಾಗಿ ಸೇವೆ ಸಲ್ಲಿಸಿದವರು, ಮುಂತಾದ ಮಾನವ ರತ್ನಗಳನ್ನು ಒಳಗೊಳ್ಳುತ್ತದೆ. ಇಂತಹ ರತ್ನಗಳಲ್ಲೊಂದು, ಮಹಾರಾಷ್ಟ್ರದ ನಾಗಪುರದಲ್ಲಿ 19ನೇ ಶತಮಾನದ ಉತ್ತರಾರ್ಧದಲ್ಲಿ, 1889 ಏಪ್ರಿಲ್ 1 ರ ಯುಗಾದಿಯಂದು ಜನ್ಮತಳೆದ ಕೇಶವ ಬಲಿರಾಮ ಹೆಡಗೆವಾರ್. ತಂದೆ ಬಲಿರಾಮ ಪಂತ್, ತಾಯಿ ರೇವತಿಬಾಯಿ, ಹಾಸಿ ಹೊದೆಯಲು ಸಾಕಷ್ಟಿದ್ದ ಬಡತನ. ತಂದೆಯವರ ವೃತ್ತಿಯೇ ಅಂಥದ್ದು. ಅಂದಿನ ಕಾಲದ ಪೌರೋಹಿತ್ಯ. ಆದರೂ ಉತ್ತಮ ಸಂಸ್ಕಾರ ನೀಡಲು ಬೇಕಾದ ಮೌಲ್ಯಗಳಿಗೇನೂ ಬಡತನವಿರಲಿಲ್ಲ. ಹೀಗಾಗಿ ಕೇಶವ ಮತ್ತು ಅವನ ಇಬ್ಬರು ಅಣ್ಣಂದಿರು ಮಹಾದೇವ ಮತ್ತು ಸೀತಾರಾಮರಿಗೆ ಮತ್ತೊಬ್ಬರ ಕಷ್ಟಗಳಿಗೆ ಮರುಗುವ, ಅನ್ಯಾಯವನ್ನು ದಿಟ್ಟತನದಿಂದ ಎದುರಿಸುವ ಸಂಸ್ಕಾರ ಬಾಲ್ಯದಿಂದಲೇ ಇತ್ತು.

ಕೇಶವ ಬೆಳೆದಂತೆಲ್ಲಾ ದೇಶಭಕ್ತಿಯ ಸಸಿಯೂ ಬೆಳೆದು ಹೆಮ್ಮರವಾಗತೊಡಗಿತು. ದೇಶವೇ ಮನೆ, ಸಕಲ ದೇಶವಾಸಿಗಳೂ ಬಂಧುಗಳು, ಅವರ ಸುಖವೇ ನನ್ನ ಸುಖ. ಅವರ ದುಃಖ ನನ್ನ ದುಃಖ ಎಂಬ ಭಾವನೆ ಬೆಳೆಯಿತು. ಅಂದಿನ ದೇಶದಲ್ಲಿನ ವಾತಾವರಣವೂ ಇದಕ್ಕೆ ಪೂರಕವಾಗಿತ್ತು. ಕೇಶವನ ಮನಸ್ಸು ನಾಡಬಿಡುಗಡೆಗಾಗಿ ತುಡಿಯಿತು.

ನಾಗಪುರದ ಸಾಮಾಜಿಕ ಹಿರಿಯರ ಸಹಕಾರದಿಂದ ವೈದ್ಯಕೀಯ ವ್ಯಾಸಂಗ ನೆಪ ಮಾಡಲು ಕಲ್ಕತ್ತೆಗೆ ತೆರಳಿದ ಕೇಶವನಿಗೆ ವ್ಯಾಸಂಗ ನೆಪ ಮಾತ್ರ. ಕ್ರಾಂತಿಕಾರಿಯಾಗುವುದು ಬಾಳಗುರಿ. ಪದವಿ ಪಡೆದರೂ ವೃತ್ತಿ ಮಾಡದಿರುವ ನಿರ್ಧಾರ. ಕೇಶವ, ಡಾ॥ ಕೇಶವರಾವ್ ಆಗಿ ನಾಗಪುರಕ್ಕೆ ಹಿಂದಿರುಗಿದಾಗ ಚಿಕ್ಕಪ್ಪನಿಗೆ, ಅತ್ತಿಗೆಯರಿಗೆ ವೈದ್ಯಕೀಯ ಪದವಿ ಪಡೆದಿರುವ ಮನೆಯ ಮಗ ಕೈತುಂಬ ಸಂಬಳತಂದು ಮನೆಗೆ ಆಧಾರವಾಗುತ್ತಾನೆ ಎಂಬ ಕನಸು. ಆದರೆ ಸಹಸ್ರ ವರ್ಷಗಳ ಪರಕೀಯರ ಆಳ್ವಿಕೆಗೊಳಗಾಗುವ ಕಾಯಿಲೆ ಈ ದೇಶಕ್ಕೇಕೆ ಬಂತು? ಅದರ ಚಿಕಿತ್ಸೆಗೇ ಮಾರ್ಗವೇನು? ಎಂದು ಚಿಂತಿತರಾಗಿದ್ದ ಡಾ॥ ಕೇಶವ ರಾವ್ ಮನೆಯವರಿಗೆ "ದೇಶ ಇಂದು ಕಷ್ಟದಲ್ಲಿದೆ. ಅದಕ್ಕೆ ತಗಲಿರುವ ಭೀಕರ ವ್ಯಾಧಿಯನ್ನು ಗುಣಪಡಿಸುವ ಔಷಧಿ ಕಂಡು ಹಿಡಿಯುವುದಕ್ಕೇ ನನ್ನ ಜೀವನ ಮುಡಿಪು, ಇದಕ್ಕೆ ನಿಮ್ಮ ಸಹಕಾರವೂ ಇರಲೆಂದು ಪ್ರಾರ್ಥನೆ" ಎಂದು ನುಡಿದ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಜೈಲು ಶಿಕ್ಷೆಗೊಳಗಾಗಿ ಜೈಲಿನಲ್ಲಿದ್ದಾಗ ಅವರ ಚಿಂತನೆಗಳಿಗೊಂದು ಮೂರ್ತ ರೂಪ ದೊರಕಿತು. ಎಲ್ಲಿಯವರೆಗೆ ದೇಶದ ಪ್ರತೀ ನಾಗರಿಕನ ಮನಸ್ಸಿನಲ್ಲೂ ತನ್ನ ಸ್ವರೂಪದ ಜಾಗೃತಿಯಾಗುವುದಿಲ್ಲವೋ, ಎಲ್ಲಿಯವರೆಗೆ ಇವರೆಲ್ಲ ಒಗ್ಗೂಡಿ ಬಂದು ನಾಡ ದೇವಿಯ ಪೂಜೆ ಕೈಗೊಳ್ಳುವ ವ್ರತಧಾರಿಗಳಾಗುವುದಿಲ್ಲವೋ, ಅಲ್ಲಿಯವರೆಗೆ ಈ ದೇಶ ಪರಕೀಯರ ದಾಳಿ ಒಳಗಾಗುವುದು ನಿಶ್ಚಿತ. ಅದಕ್ಕಾಗಿ ಸತ್ತಂತೆ ಮಲಗಿರುವ ಭಾರತೀಯರನ್ನು ಬಡಿದೆಬ್ಬಿಸುವ, ಅವರನ್ನು ಒಂದು ಸೂತ್ರದಲ್ಲಿ ಬಂಧಿಸಿಡುವ ಒಂದು ವ್ಯವಸ್ಥೆಯನ್ನು ರೂಪಿಸಬೇಕೆಂದು ನಿರ್ಧರಿಸಿದರು. ಜೈಲಿನಿಂದ ಬಿಡುಗಡೆಯಾಗಿ ಬಂದ ಕೂಡಲೇ ತನ್ನ ಚಿಂತನೆಗೊಂದು ಸರಳ ಮೂರ್ತರೂಪ ನೀಡಿದರು.

ಆಗ ಕೇಶವರಾವ್‌ಗೆ 35 ವರ್ಷ. ಒಂದಷ್ಟು ಕಿಶೋರರನ್ನು ಸೇರಿಸಿಕೊಂಡು ಪಾಳುಬಿದ್ದ ಜಾಗವನ್ನು ಶುದ್ಧಗೊಳಿಸಿ ಅಲ್ಲಿ ಅವರೊಂದಿಗೆ ಆಟ, ಹಾಡು, ಚರ್ಚೆ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಆಟಕ್ಕೆ ಆಕರ್ಷಿತರಾದ ವಿದ್ಯಾರ್ಥಿಗಳು ಅವರ ವಿಚಾರಗಳಿಂದಲೂ ಪ್ರಭಾವಿತರಾದರು. ಈ ರೀತಿ ಸೇರಿ ಒಂದು ಘಂಟೆಯ ಸಮಯ ಕಳೆಯುವುದಕ್ಕೆ 'ಶಾಖೆ' ಎಂದು ಕರೆದರು. ಕ್ರಮೇಣ ಇಂತಹ ಶಾಖೆಗಳು ನಾಗಪುರದ ಹಲವು ಬಡಾವಣೆಗಳಿಗೆ ಹಾಗೂ ಸುತ್ತಮುತ್ತಲಿನ 'ಸಂಘ-ಗಂಗೆ' ರಾಷ್ಟ್ರೀಯ ಸ್ವಯಂಸೇವಕ ಸಂಘವೆಂಬ ಹೆಸರಿನಲ್ಲಿ ಇಂತಹ ಹಲವು ಸಹಸ್ರ ಶಾಖೆಗಳ ರೂಪದಲ್ಲಿ ಭಾರತದಾದ್ಯಂತವಲ್ಲದೆ ವಿಶ್ವದ ಹಲವು ದೇಶಗಳಲ್ಲಿ ಹಬ್ಬಿದೆ. ಲಕ್ಷಾಂತರ ಸ್ವಯಂಸೇವಕರು ಲಕ್ಷಕ್ಕೂ ಮೀರಿ ಸಮಾಜ ಸೇವಾ ಚಟುವಟಿಕೆಗಳನ್ನು ಶಿಕ್ಷಣ, ಆರೋಗ್ಯ ಮುಂತಾದ ಹಲವು ಹತ್ತು ಕ್ಷೇತ್ರಗಳಲ್ಲಿ ನಡೆಸುತ್ತಿದ್ದಾರೆ. ಪ್ರಕೃತಿ ವಿಕೋಪದಿಂದ ಹಾನಿ ಉಂಟಾದಾಗ ಹಾನಿಗೊಳಗಾದವರ ಸೇವೆಗೆ ಮೊದಲು ಧಾವಿಸುವವರು ಈ ಸಂಘದ ಕಾರ್ಯಕರ್ತರೇ. ಈ ಬಗೆಯ ಚಟುವಟಿಕೆಗಳನ್ನು, ಈ ಕಾರ್ಯಕರ್ತರ ಬದ್ಧತೆಯನ್ನು ಕಂಡು ಕೋಟ್ಯಾಂತರ ಭಾರತೀಯರು 'ಭಾರತದ ಪುನರುತ್ಥಾನ' ಇವರಿಂದಲೇ ಸಾಧ್ಯ ಎಂದು ನಂಬಿದ್ದಾರೆ. ಆ ದಿನಕ್ಕಾಗಿ ಕಾತುರದ ಕಣ್ಣುಗಳಿಂದ ಕಾಯುತ್ತಿದ್ದಾರೆ. ●

# ಕಾಶ್ಮೀರ ಫೈಲ್ಸ್

**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**



ನಮಸ್ತೇ ಶಾರದಾದೇವಿ ಕಾಶ್ಮೀರ ಪುರವಾಸಿನಿ,

ಕಾಶ್ಮೀರವನ್ನು ಶಾರದೆಯ ಆವಾಸಸ್ಥಾನ, ಸರ್ವಜ್ಞಪೀಠವಿರುವ ಪವಿತ್ರ ಸ್ಥಳ, ಜೊತೆಗೆ ಪ್ರಕೃತಿದತ್ತವಾದ ಅನುಪಮ ಸೌಂದರ್ಯದೊಂದಿಗೆ ಭೂಲೋಕದ ಸ್ವರ್ಗವೇ ಎನಿಸಿದೆ ಎಂಬ ವಿವರಣೆಗಳೊಂದಿಗೆ ಗುರುತಿಸಲಾಗಿದೆ. ಇದೇ ಭಾರತಕ್ಕೆ ಕಿರೀಟಪ್ರಾಯವೆನಿಸಿರುವ ಕಾಶ್ಮೀರ.

'ಇತಿಹಾಸ ತಿಳಿಯದವರಿಗೆ ಭವಿಷ್ಯವೇ ಇಲ್ಲ' ಎಂದಿದ್ದಾರೆ ಹಿರಿಯರು. ಇತ್ತೀಚೆಗೆ ದೇಶ, ವಿದೇಶಗಳಲ್ಲಿ ಪ್ರದರ್ಶನಗೊಂಡ 'ಕಾಶ್ಮೀರ್ ಫೈಲ್ಸ್' ಚಲನಚಿತ್ರದಿಂದ ಎಲ್ಲರೂ ಕಾಶ್ಮೀರದತ್ತ ಕಣ್ಣುಬಿಟ್ಟು ನೋಡುವಂತಾಗಿದೆ. ಬಹುದೊಡ್ಡ ಸಂಚಲನವನ್ನೇ ಎಲ್ಲರಲ್ಲಿ ಹುಟ್ಟುಹಾಕಿದೆ. ಇತಿಹಾಸದ ಪುಟಗಳನ್ನು ತೆರೆದಾಗ ಮೊದಲಿಗೆ ತಿಳಿದುಬರುವ ಅಂಶವೇ ಕಾಶ್ಮೀರ ಅಥವಾ ಕಶ್ಮೀರವೆಂಬುದು 'ಕ' ಎಂಬ ಅಕ್ಷರದಿಂದ ನಿರೂಪಿತನಾದ ಪ್ರಜಾಪತಿ ಕಶ್ಯಪನಿಂದ ನಿರ್ಮಿತವಾದ ಪ್ರದೇಶವೆಂಬುದು. ಅದು ಜ್ಞಾನೋಪಾಸನೆಯ ಕೇಂದ್ರವಾಗಿದ್ದು, ಅಲ್ಲಿನ ಸರ್ವಜ್ಞ ಪೀಠವನ್ನು ದಕ್ಷಿಣದ ತುದಿಯಿಂದ ಹೋದ ಶಂಕರಭಗವತ್ಪಾದರು ಎಲ್ಲ ಸ್ಥಳೀಯ ವಿದ್ವಾಂಸರ ಸಮ್ಮುಖದಲ್ಲಿ ಅಲಂಕರಿಸಿದರೆಂಬುದನ್ನು ತಿಳಿಯುತ್ತೇವೆ. ಈ ಜ್ಞಾನೋಪಾಸನೆಯ ಕೇಂದ್ರ ದೇಶಕ್ಕೆ ಸಾರಸ್ವತ ಪ್ರಪಂಚಕ್ಕೆ ಕೊಟ್ಟಿರುವ ಕೊಡುಗೆಗಳಾದರೂ ಎಂತಹ ಅಮೂಲ್ಯರತ್ನಗಳು? ಶ್ರೇಷ್ಠ ಅನುಭಾವಿ, ತತ್ತ್ವಶಾಸ್ತ್ರಜ್ಞ ಅಭಿನವಗುಪ್ತ, ಧ್ವನ್ಯಾಲೋಕ ಬರೆದ ಆನಂದವರ್ಧನ, ನಾಟ್ಯ ಶಾಸ್ತ್ರದ ಕರ್ತೃ ಭರತಮುನಿ, ರಾಜತರಂಗಿಣಿಯ ಕಲ್ಹಣ– ಹೀಗೆ ನೂರಾರು ಕವಿಗಳನ್ನು, ಆಲಂಕಾರಿಕರನ್ನು, ತತ್ತ್ವಶಾಸ್ತ್ರಜ್ಞರನ್ನು ಕೊಟ್ಟು ಭಾರತದ ನೆಲವನ್ನು ಸಮೃದ್ಧ ನೆಲವನ್ನಾಗಿಸಿದ ನಾಡು ಈ ಕಶ್ಮೀರ ದೇಶ. ಶೈವಾಗಮ, ಕಾವ್ಯಮೀಮಾಂಸೆ ಎಲ್ಲವೂ ಹುಟ್ಟಿದ್ದೇ ಈ ನೆಲದಲ್ಲಿ. ದೇಶ–ವಿದೇಶಗಳಿಂದ ಇಲ್ಲಿನ ಜ್ಞಾನಸಾಗರದಿಂದ ಒಂದಷ್ಟಾದರೂ ಮೊಗೆದುಕೊಂಡು ಹೋಗಲು ಹಂಬಲಿಸಿ ಬರುತ್ತಿದ್ದ ಜ್ಞಾನದಾಹಿಗಳದೆಷ್ಟೋ. ಇವೆಲ್ಲ ವೈಭವ ಆ ಕಾಲದಲ್ಲಿತ್ತು.

ಇವೆಲ್ಲ ವಿವರಗಳನ್ನು ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿರುವ ಈ ನೆಲದ ಕಥೆ ಕೆಲವು ದಶಕಗಳಿಂದ ಏನಾಗಿಹೋಗಿದೆ? ವರ್ತಮಾನದ ದಿನಗಳು ಎಂತಹ ಕರುಣಕಥೆಯನ್ನು, ಮಾನವನ ಆಸುರೀಗುಣದ ಪರಮಾವಧಿಯ ನಡವಳಿಕೆಗಳನ್ನು ಕುರಿತು ಕಥೆಯನ್ನು ಹೇಳುತ್ತಿದೆಯೆಂದರೆ ಇದಕ್ಕಿಂತ ದುಃಖಕರವಾದ ಸಂಗತಿ ಬೇರೊಂದಿಲ್ಲವೇನೋ. 'ಕಾಶ್ಮೀರ್ ಫೈಲ್ಸ್' ಇದೆಲ್ಲವನ್ನೂ ಹೇಳುತ್ತದೆ.

1990 ರ ಜನವರಿಯಲ್ಲಿ ಕಶ್ಮೀರದ ಪಂಡಿತ ಸಮುದಾಯದ ಮೇಲೆ ನಡೆಸಿದ ಅಮಾನವೀಯ ದೌರ್ಜನ್ಯ, ನರಸಂಹಾರ, ಬರ್ಬರಕೃತ್ಯಗಳು ನಿಂತ ನಿಲುವಿನಲ್ಲಿಯೇ ಎಲ್ಲವನ್ನೂ ಬಿಟ್ಟು, ಅಷ್ಟೇ ಅಲ್ಲ, ಬಂಧು ಬಳಗದವರ ಕೊಲೆಯಾಗುತ್ತಿದ್ದುದನ್ನು ನೋಡಿಯೂ ತಮ್ಮ ಜೀವ ಉಳಿದರೆ ಸಾಕೆಂದು ಓಡಿಹೋಗಬೇಕಾದ ಅಸಹಾಯಕತೆ ಎಲ್ಲವನ್ನೂ ಸತ್ಯ ಘಟನೆಗಳ ಆಧಾರದೊಂದಿಗೇ ತೆರೆದಿಡಲಾಗಿದೆ. ನೋಡುವ ಪ್ರತಿವ್ಯಕ್ತಿಯಲ್ಲಿನ ಮಾನವೀಯ ಗುಣವನ್ನು ಚಿತ್ರ ಬಡಿದೆಬ್ಬಿಸುತ್ತದೆ. ಹಿರಿಯರಲ್ಲಿ, ಕಿರಿಯರಲ್ಲಿ ಪ್ರತಿಯೊಬ್ಬರಲ್ಲಿಯೂ ಏಳುವ ಪ್ರಶ್ನೆಗಳೆಂದರೆ ಮತಾಂಧತೆಯಿಂದ ಒಂದು ಇಡೀ ಸಮುದಾಯವನ್ನು ತನ್ನ ನೆಲದಿಂದ ಹೊರಕ್ಕೆ ದಬ್ಬುವಂತಹ ದ್ವೇಷದಿಂದ ಏನು ಸಾಧಿಸಲಾದೀತು? ಮನುಷ್ಯ ಇಷ್ಟೊಂದು ಕ್ರೂರತನವನ್ನು ಹೊಂದಲು ಸಾಧ್ಯವೇ? ವೃದ್ಧರು, ಹೆಂಗಸರು, ಮಕ್ಕಳು, ಗರ್ಭಿಣಿಯರು ಎಂಬ ಯಾವ ಭೇದವೂ ಇಲ್ಲದೆ ಬರ್ಬರವಾಗಿ ಕೊಲೆಯಾಗಿ ಹೋದ ಕಶ್ಮೀರೀ ಪಂಡಿತರು ಮಾಡಿದ್ದ ಅನ್ಯಾಯವಾದರೂ ಏನು? ಎಲ್ಲವನ್ನೂ ತಿಳಿದರೂ ದೇಶದ ರಾಜಕೀಯ ಶಕ್ತಿಗಳು ಇದುವರೆಗೂ ಆ ಸಮುದಾಯದ ನೆರವಿಗೆ ಧಾವಿಸಲಿಲ್ಲವೇಕೆ? ಪ್ರಜಾಸಮುದಾಯದ ಕಡೆಯಿಂದಾಗಲೀ, ಮಾಧ್ಯಮಕ್ಷೇತ್ರಗಳಾಗಲೀ ಅವರ ಕರುಣಕಥೆಗೆ ಸ್ಪಂದಿಸಲಿಲ್ಲವೇಕೆ? ಮನುಷ್ಯನ ನಾಗರೀಕತೆಯ ಲಕ್ಷಣವೆಂದರೆ ಇದೇ ಏನು? ಇತ್ಯಾದಿ ಉತ್ತರಿಸಲಾಗದ, ಉತ್ತರ ದೊರೆಯಲಾಗದ ಪ್ರಶ್ನೆಗಳು ಒಂದಾದ ಮೇಲೊಂದು ಉದ್ಭವಿಸುತ್ತವೆ. ಇಂದಿಗೂ ಪ್ರಶ್ನೆಗಳು ಹಾಗೇ ಉಳಿದುಬಿಟ್ಟಿವೆ.

ಹಾಗೆ ನೋಡಿದರೆ, 1990ರ ಜನವರಿಯಲ್ಲಿ ಕಶ್ಮೀರೀಪಂಡಿತರ ಮೇಲೆ ನಡೆದ ಆಕ್ರಮಣ ಮೊದಲಸಲವೇನಲ್ಲ. ಬರೋಬ್ಬರಿ ಏಳನೇ ಬಾರಿಗೆ ನಡೆದ ದೌರ್ಜನ್ಯವದು. ಮುಘಲರ ಕಾಲದಿಂದಲೂ ಪ್ರಾರಂಭವಾದ ಈ ಹಿಂಸಾಕೃತ್ಯ ಔರಂಗಜೇಬನ ಕಾಲಕ್ಕಿಂತಲೂ ಹಿಂದೆ, ಇಸ್ಲಾಮೀಕರಣ ಆರಂಭವಾದ ಚರಿತ್ರೆಯ ಪುಟಗಳಲ್ಲೇ ಕಾಣುತ್ತದೆ. ಸರಸ್ವತೀ ಆರಾಧನೆಯನ್ನು ಮಾಡುತ್ತ ತಮ್ಮಷ್ಟಕ್ಕೆ ಸಾತ್ವಿಕ ಜೀವನ ನಡೆಸುತ್ತಿದ್ದ ಕಶ್ಮೀರಿ ಪಂಡಿತರ ಸಮುದಾಯವನ್ನು ಪರದೇಶಿಗಳಾಗಿಸಿದ ಘಟನೆಗಳ ವಿವರಗಳು ಈಗ ಮೂವತ್ತೆರಡು ವರ್ಷಗಳ ನಂತರ 'ಕಶ್ಮೀರೀ ಫೈಲ್ಸ್' ಸಿನಿಮಾ ನೋಡಿದ ಮೇಲೆ ಪ್ರಪಂಚದ ಮೂಲೆ ಮೂಲೆಗಳಲ್ಲಿ ನೆಲೆಸಿ, ಬದುಕು ಕಟ್ಟಿಕೊಂಡಿರುವವರ ನೋವಿನೊಂದಿಗೆ ಬಿಚ್ಚಿಕೊಳ್ಳುತ್ತಿವೆ. ಇಡೀ ಕಾಶ್ಮೀರವನ್ನು ಇಸ್ಲಾಮೀಯರ ಪ್ರದೇಶವನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ನಡೆಸಿದ ದೌರ್ಜನ್ಯ ಒಂದಾದರೆ ಪಠಾಣರೆಂಬ ದಾಳಿಕೋರರು ನಡೆಸಿದ ಲೂಟಿ ಮತ್ತೊಂದು ಕಾರಣವಾಗಿ ಪಂಡಿತ ಸಮುದಾಯ ಮನೆ, ಮಠ ಸಮಸ್ತವನ್ನೂ ಬಿಟ್ಟು ಓಡುವಂತಾಯಿತು. ಹಾಗೆ ಹೋದವರಿಗೆ ಸಿಕ್ಕಿದ ಸಹಾಯವಾದರೂ ಯಾವ ಪ್ರಮಾಣದಲ್ಲಿ? ಕಲ್ಪನೆಗೂ ನಿಲುಕದ ಪರಿಸ್ಥಿತಿಯಲ್ಲಿ ಜೀವಿಸಬೇಕಾದವರ ಕಣ್ಣೀರು ಇನ್ನೂ ಬತ್ತಿಹೋಗಿಲ್ಲವೇನೋ.

ಒಂದೇ ಬಿಡಾರದಲ್ಲಿ (ಟೆಂಟ್) ಐದಾರು ಕುಟುಂಬಗಳು, ಒಂದು ಕೋಣೆಯಲ್ಲಿ ಮೂರ್ನಾಲ್ಕು ಸಂಸಾರಗಳು, ಹಾವು, ಚೇಳುಗಳು ನುಗ್ಗಿ ಬರುವ ಬಿಡಾರಗಳು. ನೀರಿಗಾಗಿ ಅದೆಷ್ಟೋ ದೂರದಿಂದ ಹೊತ್ತು ತರಬೇಕಾದ ವಸತಿ ಪ್ರದೇಶಗಳು. ಮಕ್ಕಳಿಗೆ ಶಾಲಾ ಶಿಕ್ಷಣವಿಲ್ಲದೆ, ಎರಡು ಹೊತ್ತಿನ ಊಟಕ್ಕೂ ತತ್ವಾರವಾದಂತಹ ಪರಿಸ್ಥಿತಿ. ವಿವರಿಸುತ್ತ ಹೋದರೆ ಇದೆಲ್ಲವನ್ನು ಅನುಭವಿಸಿದವರ ನೋವಿನ ನೆನಪುಗಳಿಗೆ ಕೊನೆಯೇ ಇಲ್ಲವೇನೋ ಎನಿಸುವಂತಿವೆ. ಹೀಗೆ ಅನಾಥರಾಗಿ ತಾಯ್ನೆಲ ಬಿಟ್ಟು ಹೊರಟವರ ಸಂಖ್ಯೆಯಾದರೂ ಎಷ್ಟಿರಬಹುದು? ಇಲ್ಲೂ ಸರಿಯಾದ ದಾಖಲೆಯೇ ಇಲ್ಲ. ಮಾಧ್ಯಮ ಕ್ಷೇತ್ರವೂ ನಿಖರವಾದ ಸಂಖ್ಯೆಯನ್ನು ಉಲ್ಲೇಖಿಸುವುದಿಲ್ಲ. ಕೆಲವರು ಸಾವಿರಗಳ ಸಂಖ್ಯೆಯೆಂದರೆ, ಕೆಲವು ಮಾಹಿತಿಗಳಲ್ಲಿ ಏಳೆಂಟು ಲಕ್ಷ ಜನರೇ ಹೀಗೆ ಕಶ್ಮೀರವನ್ನು ಬಿಟ್ಟು ಹೋಗುವಂತಾಯಿತೆಂದಿದೆ. ಮೂರ್ನಾಲ್ಕು ಲಕ್ಷವೆಂದು ಮತ್ತೊಂದು ಮಾಹಿತಿ ಹೇಳುತ್ತದೆ. ಇಂದಿಗೂ ಅವರಿಗಾಗಿ ಸರ್ಕಾರ ಒದಗಿಸಿಕೊಟ್ಟಿರುವ ಪುನರ್ವಸತಿ ಯೋಜನೆಯ ಕಟ್ಟಡಗಳೂ ಸಹ ಅತ್ಯಂತ ಸಾಧಾರಣ ದರ್ಜೆಯವೇ ಆಗಿದ್ದು ಅವರಿಗೆ ಅಗತ್ಯವಾಗಿ ಕೊಡಬೇಕಾದ ಪೂರ್ಣ ಪ್ರಮಾಣದ ನೆರವು ಸಿಕ್ಕಿಲ್ಲವೆಂದೇ ಹೇಳಬಹುದು.

'ಕಾಶ್ಮೀರ ಫೈಲ್ಸ್' ನಾಲ್ಕುವರ್ಷಗಳ ಸತತ ಸಂಶೋಧನೆಯ ನಂತರ ಹೊರಬಂದ ಚಿತ್ರವಾಗಿದ್ದು ಅದರಲ್ಲಿ ತೋರಿಸಿರುವ ಒಂದಷ್ಟು

**ಪುಟ 9 ಕ್ಕೆ ➤**

# ಮಕ್ಕಳ ರಜಾ ದಿನಗಳು



**ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್**
**ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ,**
**ಬೆಂಗಳೂರು –560 032**
**ದೂರವಾಣಿ ಸಂಖ್ಯೆ: 9980033636**



ಇಂದು ಪ್ರಪಂಚವನ್ನೆಲ್ಲಾ ಆವರಿಸಿ ಇನ್ನೂ ತಳ ಊರಿರುವ ಕೋವಿಡ್–19 ಅಥವಾ ಕರೋನಾ ಎಂಬ ವೈರಸ್ಸು ಜನ ಜೀವನವನ್ನು ಸಂಪೂರ್ಣವಾಗಿ ಹಾದಿ ತಪ್ಪಿಸಿದೆ. ಈ ಎರಡು ವರ್ಷಗಳಲ್ಲಿ ಬಹಳ ಬದಲಾವಣೆಗಳಾಗಿ ಮುಖ್ಯವಾಗಿ ಮಕ್ಕಳ ಭವಿಷ್ಯಕ್ಕೆ ಮಾರಕ ಉಂಟಾಗಿದೆ.

ನಿಧಾನವಾಗಿ ಈಗ ಚೇತರಿಕೆ ಕಂಡುಬಂದು ಮತ್ತೆ ಮಕ್ಕಳ ಭವಿಷ್ಯ ಸರಿಯಾದ ದಾರಿಯಲ್ಲಿ ರೂಪುಗೊಳ್ಳುವ ಆಶಾಭಾವನೆ ಉಂಟಾಗುತ್ತಿದೆ. ಸರಿಸುಮಾರು ಎರಡು ವರುಷಗಳಿಂದ ಮನೆಯಲ್ಲೇ ಕಾಲ ಕಳೆದಿದ್ದರಿಂದ ಈಗ ಬರುತ್ತಿರುವ ರಜಾದಿನಗಳನ್ನು ವ್ಯರ್ಥಮಾಡದೇ ಸರಿಯಾದ ರೀತಿಯಲ್ಲಿ ಉಪಯೋಗಿಸಿ, ರಜಾ ದಿನದ ಸದ್ಬಳಕೆಗಾಗಿ ಮಕ್ಕಳಿಗೆ ಕೆಲವೊಂದು ಸಲಹೆ ಸೂಚನೆಗಳು ಹೀಗಿವೆ. ಇವುಗಳನ್ನು ಅನುಸರಿಸಿದರೆ ಖಂಡಿತವಾಗಿಯೂ ಮಕ್ಕಳ ಏಳಿಗೆಯಾಗುತ್ತದೆ.

- ಮೊದಲಿಗೆ ತಮ್ಮ ದೈನಂದಿನ ದಿನಚರಿಯನ್ನು ಬದಲಾಯಿಸಬೇಕು ಮತ್ತು ಶಿಸ್ತಿನ ಜೀವನವನ್ನು ಅಳವಡಿಸಿಕೊಳ್ಳಬೇಕು.
- ಬೆಳಗ್ಗೆ ಏಳುವುದರಿಂದ ರಾತ್ರಿ ಮಲಗುವವರೆಗೂ ಸಮಯಕ್ಕೆ ಸರಿಯಾಗಿ ಮತ್ತು ಕ್ರಮಬದ್ಧವಾಗಿ ಕೆಲಸಗಳನ್ನು ಮಾಡುವ ರೂಢಿಯನ್ನು ಅಭ್ಯಾಸ ಮಾಡಬೇಕು.
- ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಉತ್ತಮ ಪುಸ್ತಕ ಓದುವ ಹವ್ಯಾಸ, ಮಾನಸಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ. ಓದುವ ಅಭ್ಯಾಸದಿಂದ, ತಾರ್ಕಿಕಶಕ್ತಿ ಮತ್ತು ಆಲೋಚನಾ ಸಾಮರ್ಥ್ಯ ಹೆಚ್ಚುತ್ತದೆ.
- ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆಯೋ, ಅಂದರೆ ಸಂಗೀತ, ನೃತ್ಯ, ಗಾರ್ಡನಿಂಗ್, ಗ್ರಾಫಿಕ್ಸ್, ಕ್ರಾಫ್ಟ್, ಹಾಡುಗಾರಿಕೆ, ಈಜು ಮತ್ತು ಹೊಸ ಹೊಸ ತಂತ್ರಜ್ಞಾನವನ್ನು ಬಳಸುವ ಕಲೆ ಮುಂತಾದವುಗಳನ್ನು ಕಲಿಯುವುದರಿಂದ ಮುಂದೆ ವಿದ್ಯಾಭ್ಯಾಸದ ಜೊತೆ ಜೊತೆಗೆ ಆ ಕ್ಷೇತ್ರಗಳಲ್ಲಿ ಕೂಡ ಸಾಧನೆಯನ್ನು ಮಾಡಬಹುದು.
- ಕ್ರೀಡೆಗಳಲ್ಲಿ ಆಸಕ್ತಿ ವಹಿಸಿ ಹೊರಾಂಗಣ ಮತ್ತು ಒಳಾಗಂಣ ಆಟಗಳಲ್ಲಿ ತೊಡಗಿಸಿಕೊಂಡರೆ ದೈಹಿಕ ಬೆಳವಣಿಗೆ ಉತ್ತಮವಾಗಿರುತ್ತದೆ ಮತ್ತು ಬೌದ್ಧಿಕವಾಗಿ ಚೇತೋದಾರಿಯಾಗಿರುತ್ತದೆ.
- ಯೋಗ, ಧ್ಯಾನಗಳನ್ನು ಮಾಡಿದರೆ ಸಕಾರಾತ್ಮಕ ಚಿಂತನೆಗೂ ಹೆಚ್ಚಾಗಿ, ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಇದರಿಂದ ಕಲಿಕೆಯಲ್ಲಿ ಏಕಾಗ್ರತೆ ಮಾಡುತ್ತದೆ.
- ಮನೆಯಲ್ಲಿ ಇರುವ ಹಿರಿಯರಿಂದ ನಮ್ಮ ಸಂಸ್ಕೃತಿ, ಸಂಸ್ಕಾರ, ಆಚಾರ ವಿಚಾರಗಳನ್ನು ಮತ್ತು ಕಿರಿಯರ ಜೊತೆ ಹೊಂದಾಣಿಕೆ ಸ್ವಭಾವವನ್ನು ರೂಢಿಸಿಕೊಳ್ಳುವುದನ್ನು ರಜಾದಿನಗಳಲ್ಲಿ ಕಲಿಯಬಹುದು. ಇದರಿಂದ ನಮ್ಮ ನಾಡು, ನುಡಿ, ಭಾಷೆಯ ಮಹತ್ವವನ್ನು ಅರಿಯಬಹುದು.
- ಸಂಬಂಧಗಳ ಮಹತ್ವವನ್ನು ಅರಿತು, ಸಂಬಂಧಿಕರಲ್ಲಿ ಸ್ನೇಹಿತರಲ್ಲಿ, ನೆರೆಹೊರೆಯವರಲ್ಲಿ ಪ್ರೀತಿಯಿಂದ ಇರುವುದನ್ನು ಮತ್ತು ಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡುವುದರಿಂದ ಮಾನಸಿಕ ಆರೋಗ್ಯ ಉತ್ತಮಗೊಳಿಸಿಕೊಳ್ಳುವುದನ್ನು ಕಲಿಯಬಹುದು.
- ಮನೆಯಲ್ಲಿ ತಂದೆ ತಾಯಿಗಳಿಗೆ, ಹಿರಿಯರಿಗೆ ಮನೆಗೆಲಸದಲ್ಲಿ ಸಹಾಯ ಮಾಡುವುದು ಮತ್ತು ಅಡುಗೆ ಕೆಲಸ, ಶುಚಿತ್ವದ ಕೆಲಸಗಳನ್ನು ಕಲಿಯಬಹುದು. ಇದರಿಂದ ಮುಂದೆ ಸ್ವತಂತ್ರವಾಗಿ ಬದುಕಲು ಸುಲಭವಾಗುವುದು.
- ಬೇರೆ ಬೇರೆ ಭಾಷೆ, ಸಂಸ್ಕೃತಿ, ಆಚರಣೆಗಳನ್ನು, ಕಲೆಗಳನ್ನು ಕಲಿಯಬಹುದು. ಇದರಿಂದ ಬಾವಿಯೊಳಗಿನ ಕಪ್ಪೆಯಂತಾಗದೆ ಜ್ಞಾನದ ಅಭಿವೃದ್ಧಿ ಆಗುವುದು ಮತ್ತು ನಮ್ಮ ದೇಶ, ನಮ್ಮ ಇತಿಹಾಸ, ಪರಂಪರೆಗಳ ಬಗ್ಗೆ ಅಭಿಮಾನ ಮೂಡುವುದು.
- ಎಲ್ಲಕ್ಕಿಂತ ಮುಖ್ಯವಾಗಿ ಆದಷ್ಟು, ಟಿವಿ, ಮೊಬೈಲ್‌ಗಳಿಂದ ದೂರವಿರುವ ಶಿಸ್ತನ್ನು ಕಲಿಯಬೇಕು. ತಂತ್ರಜ್ಞಾನ ಮುಖ್ಯವೇ ಹೊರತು ಅದೇ ಜೀವನವಲ್ಲ.
- ಮಕ್ಕಳು ಯಾವ ಪಠ್ಯವಿಷಯವು ಕ್ಲಿಷ್ಟವಾಗಿರುತ್ತದೋ ಆ ವಿಷಯವನ್ನು ರಜಾದಿನಗಳಲ್ಲಿ ಹೆಚ್ಚು ಒತ್ತು ಕೊಟ್ಟು ಕಲಿತರೆ ಮುಂದೆ ಆ ವಿಷಯ ಸುಲಭವಾಗುತ್ತದೆ.

ಒಟ್ಟಿನಲ್ಲಿ, ಮಕ್ಕಳ ಕಲಿಕೆಗೆ ಮಿತಿ ಇರುವುದಿಲ್ಲ. ಕಲಿಕೆಗಾಗಿ ತಂತ್ರಜ್ಞಾನ ಬಳಸಿಕೊಂಡರೆ ತಪ್ಪಿಲ್ಲ. ಆದರೆ ಎಲ್ಲವೂ ಒಂದು ಇತಿಮಿತಿಯಲ್ಲಿರಬೇಕು. ಜೀವನದಲ್ಲಿ ಏನಾದರೂ ಒಂದು ಸಾಧಿಸಬೇಕು ಎನ್ನುವ ಛಲ ಬೆಳೆಸಿಕೊಳ್ಳಬೇಕು. ಕಲಿಕಾ ತರಗತಿಗಳಿಂದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಹೀಗೆ ಬಿಡುವಿನ ರಜಾ ದಿನಗಳ ಸದುಪಯೋಗವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಸೃಜನಾತ್ಮಕವಾಗಿ ಸಮಯವನ್ನು ಉಪಯೋಗಿಸಿಕೊಳ್ಳಬೇಕು. "ಮನಸ್ಸಿದ್ದರೆ ಮಾರ್ಗ, ಮನಸಿನಂತೆ ಮಹಾದೇವ".

# ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆಗೆ NEP-2020 ಹೇಳಿದ್ದೇನು?


**ಚಿದಾನಂದ ಆ ಕೇ ಪಾಟೀಲ್**
**ಪ್ರಧಾನ ಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಸದಸ್ಯರು, ಎನ್.ಇ.ಪಿ2020**
**ಅನುಷ್ಠಾನ ಸಮಿತಿ(ಶಾಲಾ ಶಿಕ್ಷಣ),**
**ಕರ್ನಾಟಕ ಸರ್ಕಾರ, ಕರ್ನಾಟಕ**




ಪ್ರಿಯ ಓದುಗರೆ...

NEP–2020 ಯಲ್ಲಿಯ ಅಂಶಗಳ ಬಗ್ಗೆ ಬರೆಯಲು ಪ್ರಾರಂಭಿಸಿದಾಗ ಓದುಗರು ಹೇಗೆ ಸ್ವೀಕರಿಸುತ್ತಾರೆ ಎನ್ನುವ ಆತಂಕವಿತ್ತು. ಆದರೆ ಸಂಚಿಕೆಯಿಂದ ಸಂಚಿಕೆಗೆ ಅಭಿಪ್ರಾಯ ತಿಳಿಸುವವರ ಸಂಖ್ಯೆ ಹೆಚ್ಚುತ್ತಿದೆ. ನಿಮ್ಮೆಲ್ಲರ ಸ್ಪಂದನೆಗೆ ಧನ್ಯವಾದಗಳು. ಈ ಸಂಚಿಕೆಯಲ್ಲಿರುವ ವಿಷಯಕ್ಕೂ ನಿಮ್ಮ ಅನಿಸಿಕೆಗಳ ನಿರೀಕ್ಷೆಯಲ್ಲಿರುವೆ.

India is a global leader in information and communication technology ಹೇಳುವ ಸಾಲುಗಳು ಭಾರತ ತಂತ್ರಜ್ಞಾನದ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯನ್ನು ತಿಳಿಸುವುದು. "The Digital India Campaign" ಡಿಜಿಟಲ್ ಭಾರತದ ಆಂದೋಲನವು ದೇಶವನ್ನು ತಂತ್ರಜ್ಞಾನ ಕ್ಷೇತ್ರದಲ್ಲಿ ಸಬಲೀಕರಣಗೊಂಡ ಸಮಾಜವಾಗಿ ಹಾಗೂ ಜ್ಞಾನಧಾರಿತ ಆರ್ಥಿಕತೆಯಾಗಿ ಬದಲಾಗಲು ಸಹಾಯವಾಗುತ್ತಿದೆ. ಇದು ಶಿಕ್ಷಣ ಕ್ಷೇತ್ರದಲ್ಲಿಯು ಮಹತ್ವದ ಪಾತ್ರವಹಿಸುತ್ತಿದೆ. ಶೈಕ್ಷಣಿಕ ವ್ಯವಸ್ಥೆಯಲ್ಲಿ ಮತ್ತು ಅದರ ಪ್ರತಿಫಲದಲ್ಲಿ ತಂತ್ರಜ್ಞಾನವು ಪ್ರಮುಖವಾಗಿದೆ.

ತಂತ್ರಜ್ಞಾನ ಇಂದು ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಸಹಾಯಕವಾಗಿ ಕಾರ್ಯಮಾಡುತ್ತಿದೆ. ಅನೇಕ ಶೈಕ್ಷಣಿಕ ಸಾಫ್ಟ್‌ವೇರ್ ಮತ್ತು ಹಾರ್ಡವೇರ್‌ಗಳು ತರಗತಿಯಲ್ಲಿ ವಿದ್ಯಾರ್ಥಿಗಳು ಏನನ್ನು ಕಲಿಯುತ್ತಾರೆ ಮತ್ತು ಹೇಗೆ ಕಲಿಯುತ್ತಾರೆ ಎಂದು ತಿಳಿಯಲು ಸಹಾಯಕವಾಗಿವೆ. Artificial intelligence, machine learning, black chains, smart boards ಮುಂತಾದವುಗಳು ವಿದ್ಯಾರ್ಥಿಗಳ ಕಲಿಕೆಯಲ್ಲಿ ಸಹಾಯಕವಾಗಿದೆ. NEP–2020ಹೇಳುವಂತೆ ಈ ಕ್ಷೇತ್ರದಲ್ಲಿ ವಿಸ್ತೃತವಾದ ಸಂಶೋಧನೆ ನಡೆಯುವ ಅಗತ್ಯವಿದೆ.

## National Educational Technology Forum (NETF)

ಕಲಿಕೆ, ಮಾಪನ, ಯೋಜನೆ, ಆಡಳಿತ ಮತ್ತು ಮತ್ತಿತರ ಅಂಶಗಳ ಉನ್ನತೀಕರಿಸುವುದಕ್ಕಾಗಿ "ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆ" ಯನ್ನು ರಚಿಸಲು ಸೂಚಿಸಿದೆ. NETF ಶೈಕ್ಷಣಿಕ ಸಂಸ್ಥೆಗಳ ಮುಖಂಡರಿಗೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಮತ್ತು ಶೈಕ್ಷಣಿಕ ಆಸ್ಥೆದಾರರಿಗೆ ಹೊಸ ಜ್ಞಾನ ಹಾಗೂ ಸಂಶೋಧನೆಯ ಜೊತೆಗೆ ಸಮಾಲೋಚನೆ ಹಾಗೂ ಅತ್ಯುತ್ತಮ ಕ್ರಮಗಳ ಕುರಿತು ವಿಚಾರ ವಿನಿಮಯಕ್ಕೆ ಅವಕಾಶ ಒದಗಿಸಿಕೊಡುವುದು.

### NETF ನ ಕಾರ್ಯಗಳು

- ತಂತ್ರಜ್ಞಾನ ಆಧಾರಿತ ಮಧ್ಯಸ್ಥಿಕೆ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸಂಸ್ಥೆಗಳಿಗೆ ಸ್ವತಂತ್ರವಾದ ಸಾಕ್ಷಿ ಆಧಾರಿತ ಸಲಹೆ ನೀಡುವುದು.
- ಶೈಕ್ಷಣಿಕ ತಂತ್ರಜ್ಞಾನದ ಬೌದ್ಧಿಕ ಹಾಗೂ ಸಾಂಸ್ಥಿಕ ಸಾಮರ್ಥ್ಯಗಳನ್ನು ಬೆಳೆಸುವುದು.
- ಈ ಕ್ಷೇತ್ರದಲ್ಲಿ ಕಾರ್ಯತಂತ್ರದ ಆದ್ಯತಾ ವಲಯಗಳ ಬಗ್ಗೆ ಒಳನೋಟ
- ಸಂಶೋಧನೆ ಮತ್ತು ಅನ್ವೇಷಣೆಗೆ ಹೊಸ ಮಾರ್ಗಗಳನ್ನು ಸೂಚಿಸುವುದು.

ಈ ಎಲ್ಲ ಕಾರ್ಯಗಳನ್ನು ಮಾಡುವುದಕ್ಕಾಗಿ NETF ಜ್ಞಾನಿಗಳನ್ನು ಹಾಗೂ ಅಭ್ಯಾಸ ನಿರತರನ್ನು ಒಳಗೊಂಡ ಸತ್ವಶಾಲಿ ವಾತಾವರಣವನ್ನು ಬೆಂಬಲಿಸುವ ಸಲುವಾಗಿ ಬಹು ಪ್ರಾದೇಶಿಕ ಹಾಗೂ ರಾಷ್ಟ್ರೀಯ ಸಮಾವೇಶಗಳು, ಕಾರ್ಯಾಗಾರಗಳನ್ನು ಆಯೋಜಿಸಲಿದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ಸಂಶೋಧಕರು, ಉದ್ಯಮಶೀಲರು ಹಾಗು ಕಾರ್ಯನಿರತರಿಂದ ಸಲಹೆಗಳನ್ನು ಪಡೆಯುವುದು.

ಶೈಕ್ಷಣಿಕ ಬೋಧನೆ– ಕಲಿಕೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳ, ಬೋಧಕರ ಸಿದ್ಧತೆ ಹಾಗೂ ವೃತ್ತಿಪರ ಬೆಳವಣಿಗೆಗೆ ನೆರವು, ಶೈಕ್ಷಣಿಕ ಪ್ರವೇಶಾತಿ, ಶೈಕ್ಷಣಿಕ ಯೋಜನೆ ಮತ್ತು ಹಾಜರಾತಿ ಮಾರ್ಪಾಡು ಇತ್ಯಾದಿ ಕಾರ್ಯಗಳಿಗೆ ತಾಂತ್ರಿಕ ನೆರವು ಪಡೆಯುವುದು. ಇದಕ್ಕಾಗಿ NCERT, CIET, CBSE, NIOS ನಂತಹ ಸಂಸ್ಥೆಗಳು ಕುಗ್ರಾಮದಲ್ಲಿರುವ ವಿದ್ಯಾರ್ಥಿಗಳು ಮತ್ತು ದಿವ್ಯಾಂಗ ವಿದ್ಯಾರ್ಥಿಗಳು ಸೇರಿದಂತೆ ಎಲ್ಲರಿಗೂ ಅನುಕೂಲವಾಗುವ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಬೋಧನೆ–ಕಲಿಕೆಗೆ ಇ–ಪಠ್ಯದ ಅಭಿವೃದ್ಧಿಯಲ್ಲಿ ತೊಡಗಲಿವೆ. ಈ ಅಭಿವೃದ್ಧಿಯಾದ ಸಂಪನ್ಮೂಲಗಳನ್ನು DIKSHA/ SWAYAM ದಂತಹ ತಾಂತ್ರಿಕ ಆಧಾರಿತ ಶಿಕ್ಷಣ ವೇದಿಕೆಗಳು ಕಲಿಕೆಯಲ್ಲಿ ತೊಡಗಿದವರಿಗೆ ತಲುಪಿಸುತ್ತವೆ.

ಹಿಂದಿನ ಶಿಕ್ಷಣ ನೀತಿಗಳಲ್ಲಿ (1986, 1992) ತಾಂತ್ರಿಕತೆ ಮತ್ತು ಅಂತರ್‌ಜಾಲದ ಬಳಕೆಯನ್ನು ಊಹಿಸಲು ಸಾಧ್ಯವಿರಲಿಲ್ಲ. ಆದರೆ ಇಂದು ಮಾನವ ಊಹೆಗಿಂತಲು ತೀವ್ರಗತಿಯಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನವನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ಕಡೆಗಣಿಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳ ಜ್ಞಾನದ ಹಸಿವಿಗೆ ತಂತ್ರಜ್ಞಾನವನ್ನು ಸಹಾಯಕವಾಗಿ ಬಳಸಿಕೊಳ್ಳಬೇಕಿದೆ. ಅದಕ್ಕಾಗಿ Artificial intelligence (AI) 3D/7D ಗಳು ದೃಷ್ಟಿಗೋಚರದ ವಾಸ್ತವಿಕತೆಯನ್ನು ಕಲಿಕೆಯಲ್ಲಿ ಇಡುವುದರ ಜೊತೆಗೆ ನವನವೀನ ತಂತ್ರಜ್ಞಾನ ದಿನೇ ದಿನೇ ಬೆಳೆಯುತ್ತದೆ. ಅದಕ್ಕಾಗಿ NETF ನಿರಂತರ ಸವಾಲುಗಳನ್ನು ಎದುರಿಸುವುದರ ಜೊತೆಗೆ ನಿಯಮಿತವಾಗಿ ಅಭಿವೃದ್ಧಿ ಹೊಂದಬೇಕಾಗುತ್ತದೆ.

ರಾಷ್ಟ್ರೀಯ ಶಿಕ್ಷಣ ಇಲಾಖೆಯು ಸ್ಥಿತ್ಯಂತರಕ್ಕೆ ಕಾರಣವಾಗಬಲ್ಲ ತಾಂತ್ರಿಕತೆಯನ್ನು ಗುರುತಿಸುತ್ತಿದ್ದಂತೆ National Research Foundation (NRF) ವು ಆ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಸಂಶೋಧನಾ ಕಾರ್ಯಕ್ಕೆ ಚಾಲನೆ ನೀಡುತ್ತಾರೆ. ಕೃತಕ ಬುದ್ಧಿಮತ್ತೆಯ (AI) ಸನ್ನಿವೇಶದಲ್ಲಿ ಮೂರು ಮಾರ್ಗೋಪಾಯಗಳ ನೀತಿಯನ್ನು NRF ಪರಿಗಣಿಸಬಹುದಾಗಿದೆ.

- ಪ್ರಧಾನ AI ಸಂಶೋಧನೆಯನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯುವುದು
- ಅನ್ವಯಿಕತೆ ಆಧಾರಿತ ಸಂಶೋಧನೆಯನ್ನು ಅಭಿವೃದ್ಧಿ ಪಡಿಸುವುದು ಹಾಗು ನಿಯೋಜಿಸುವುದು.
- ಜಾಗತಿಕ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ AI ಬಳಸಿ ಆರೋಗ್ಯಸೇವೆ, ಕೃಷಿ ಮತ್ತು ಹವಾಮಾನ ಬದಲಾವಣೆಯಂತಹ ಕ್ಷೇತ್ರದಲ್ಲಿ ಅಂತರಾಷ್ಟ್ರೀಯ ಸಂಶೋಧನೆಯ ಪ್ರಯತ್ನಗಳನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯುವುದು.

ಉನ್ನತ ಶಿಕ್ಷಣಸಂಸ್ಥೆಗಳು (HEI) ಸ್ಥಿತ್ಯಂತರ ಉಂಟುಮಾಡಬಲ್ಲ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವುದರ ಜೊತೆಗೆ ಬೋಧನಾ ಸಾಮಗ್ರಿ ಮತ್ತು ಕೋರ್ಸುಗಳ ಆರಂಭಿಕ ಆವೃತ್ತಿಗಳನ್ನು ರೂಪಿಸುವಲ್ಲಿ ಸಕ್ರಿಯವಾಗಿರುತ್ತವೆ. ಸ್ಥಿತ್ಯಂತರ ತಾಂತ್ರಿಕತೆಗಳು ಕೆಲವು ಉದ್ಯೋಗಗಳನ್ನು ಅಪ್ರಸ್ತುತಗೊಳಿಸುತ್ತದೆ. ಆದ್ದರಿಂದ ದಕ್ಷತೆ ಹಾಗೂ

ಪುಟ 9 ಕ್ಕೆ ➤

# ಸ್ವಾತಂತ್ರ್ಯ ಹೋರಾಟ ಹಿನ್ನೋಟ, ಮುನ್ನೋಟ

■ ಶ್ರೀ ಸು. ರಾಮಣ್ಣ

**ಸ್ವಾತಂತ್ರ್ಯ ಅಮೃತೋತ್ಸವದ ಸಂದರ್ಭದಲ್ಲಿ ಈ ಘಟನೆಗಳು ಎಲ್ಲರ ಸ್ಮರಣೆಗೆ ಬರಬೇಕು ಎಂಬ ಉದ್ದೇಶದಿಂದ ಈ ಲೇಖನಮಾಲೆ ಈ ಪುಟಗಳು ಸು. ರಾಮಣ್ಣನವರ ಸ್ವಾತಂತ್ರ್ಯ ಹೋರಾಟ ಪುಸ್ತಕದ ಒಂದು ಭಾಗ. ಇದು 3–4 ಕಂತುಗಳು ಬರುತ್ತದೆ**

(ಹಿಂದಿನ ಸಂಚಿಕೆಯಿಂದ...)

### 3. ಹಿಂದುಗಳ ಆತ್ಮಸ್ಥೈರ್ಯದ ಮೇಲೆ ಪ್ರಹಾರ

ತಲತಲಾಂತರದಿಂದ ಭಾರತದಲ್ಲಿಯೇ ಹುಟ್ಟಿ ಭಾರತಕ್ಕಾಗಿಯೇ ಬದುಕುತ್ತಾ, ಭಾರತಕ್ಕಾಗಿಯೇ ಸಾಯುತ್ತಾ, ಹೋರಾಡುತ್ತಾ ಬಂದವರು ಹಿಂದುಗಳೇ ಅಲ್ಲವೇ ? ನಿಜ. ಹಲವಾರು ಆಕ್ರಮಣಗಳ ಮುಂದೆ ನಾವು ಸೋತಿರಬಹುದು ಆದರೆ ಸಾಯಲಿಲ್ಲ. ನಮ್ಮದು ಸತತ ಸಂಘರ್ಷದ ಮೃತ್ಯುಂಜಯ ಇತಿಹಾಸವೆಂಬುದು ಸಿದ್ಧವಾಗಿರುವ ಸತ್ಯ. ಹೀಗಿರುವಾಗ ಸ್ವಾತಂತ್ರ್ಯ ಆಂದೋಲನದಲ್ಲಿ ಮಹಾತ್ಮಾ ಗಾಂಧಿಜೀಯವರ ಮುಂದಾಳತ್ವದಲ್ಲಿಯೇ ಹಿಂದುಗಳ ಮನೋಸ್ಥೈರ್ಯವನ್ನು ಭಗ್ನಗೊಳಿಸುವ ತಪ್ಪುಹೆಜ್ಜೆಗಳನ್ನು ಇಡಲಾಯಿತು. ಹಿಂದು ಕೈಲಾಗದವನು, ಏಟು ತಿನ್ನುವವನು, ಅವನು ಒಟ್ಟಾಗಲಾರದವನು. ಆದ್ದರಿಂದ ಹಿಂದು ಮುಸ್ಲಿಂ ಏಕತೆಯಾಗದ ಹೊರತು ಸ್ವಾತಂತ್ರ್ಯ ಅಸಂಭವ Hindu is a coward and Muslim is a bully; Hence No Independence without Hindu Muslim unity ಎಂಬ ನಿಷ್ಕರ್ಷೆಗೆ ಬರಲಾಯಿತು ಮತ್ತು ಗೊತ್ತಿಲ್ಲದೆಯೇ ಸ್ವಾತಂತ್ರ್ಯ ಸಮರದಲ್ಲಿ ಮುಸಲ್ಮಾನರಿಗೆ "ವೀಟೋ" ಅಧಿಕಾರವನ್ನು ನೀಡಲಾಯಿತು.

ಹಾಗಾದರೆ ಹಿಂದುಗಳು ದುರ್ಬಲರೇ? ನಾವು ಶಕ್ತಿಯ ಆರಾಧಕರು. ನಮ್ಮೆಲ್ಲ ದೇವರ ಕೈಗಳಲ್ಲಿ ಒಂದಲ್ಲ ಒಂದು ಶಸ್ತ್ರವಿದೆ, ದೇವಿಯರೂ ಸಹ ಶಕ್ತಿ ಸ್ವರೂಪಿಯರು ಮತ್ತು ಶಸ್ತ್ರ ಪ್ರಯೋಗವೇ ಧರ್ಮ ರಕ್ಷಣೆಗಾಗಿ. ಈ ನೆಲದಲ್ಲಿ ರಾವಣ, ಕಂಸ, ದುರ್ಯೋಧನಾದಿಗಳಿಗೆ ಸ್ಥಾನವಿಲ್ಲ. ಇಲ್ಲಿ ಶ್ರೀರಾಮ, ಶ್ರೀಕೃಷ್ಣ, ಭೀಮಾರ್ಜುನ, ಹನುಮಂತ ಇಂಥ ಪುರುಷ ಪುಂಗವರಿಗೇ ಮಾನ್ಯತೆ. ಬಲಮುಪಾಸ್ವ ನಮ್ಮ ಗುರುತು. ಎಂದಿಗೂ ಅಧರ್ಮದ ಜೊತೆ ರಾಜಿ ಮಾಡಿಕೊಳ್ಳದ ದೇಶ ನಮ್ಮದು. ಧರ್ಮಕ್ಕೇ ಜಯ ಇದು ನಮ್ಮ ಹೆಗ್ಗುರುತು. ಕಾಲಾಂತರದಲ್ಲಿ ಘೋರವಾದ ಮೈಮರೆವಿಗೆ ನಾವು ಬಲಿಯಾಗಿ ಹೋದೆವು. ವಾಸ್ತವಿಕವಾಗಿ ಪರಾಕ್ರಮ ನಮ್ಮ ಗುರುತೇ ಹೊರತು ಹೇಡಿತನವಲ್ಲ.

ಸಕಲ ಚರಾಚರ ಸೃಷ್ಟಿಯೊಂದಿಗೆ ಆತ್ಮೀಯತೆ ಹಾಗೂ ಬಂಧುತ್ವದ ನಂಟು ಹೊಂದಿರುವ ಹಿಂದು ದುರ್ಭಾಗ್ಯದಿಂದ ಬ್ರಿಟಿಷರ ವಿರುದ್ಧದ ಆಂದೋಲನದಲ್ಲಿ "ಜಾತೀಯ, ಸಂಕುಚಿತ, ಮತೀಯ ಆಗಿಹೋದ. ಹಿಂದು ಎಂದು ಕರೆದುಕೊಳ್ಳುವುದೇ ಅಪರಾಧವಾಗಿ ಹೋಯಿತು. ಅವ್ಯವಹಾರಿಕ ಅಹಿಂಸಾ ನೀತಿಯನ್ನು ಹಿಂದುವಿನ ಮೇಲೆ ಹೊರಿಸಿ, ಹಿಂಸೆಯನ್ನು ಸಹಿಸುವುದೇ ಅಹಿಂಸೆಯೆಂದಾಯಿತು. 'ಹಿಂದು'ವಿಗೆ ಹಿಂದು ಎಂಬ ಗುರುತೇ ನಿಷೇಧವಾದುದು ಒಂದು ದುರಂತವೇ ಸರಿ.

ಮೇಲಿನ ಮೂರು ಮುಖ್ಯ ಕಾರಣಗಳಿಂದಾಗಿ ನಾವು 1947ರಲ್ಲಿ ಸ್ವಾತಂತ್ರ್ಯಕ್ಕಾಗಿ ಅಪಮಾನದ, ಅನ್ಯಾಯದ ಭಾರತ ವಿಭಜನೆಯ ಬೆಲೆಯನ್ನು ತೆರಬೇಕಾಯಿತು.

### ಸ್ವಾತಂತ್ರ್ಯೋತ್ತರ ಭಾರತ– ಒಂದು ಸಮೀಕ್ಷೆ

ಇಂಗ್ಲಿಷ್‌ನಲ್ಲಿ ಒಂದು ಮಾತಿದೆ. A Nation marches forward from the past through the present to the future. ಎಂದರೆ "ಒಂದು ರಾಷ್ಟ್ರವು ಹಿಂದಿನ ಘಟನೆಗಳಿಂದ ಪಾಠ ಕಲಿತು ವರ್ತಮಾನದಲ್ಲಿ ಮುನ್ನಡೆದಾಗ ಅದರ ಸುಂದರ ಭವಿಷ್ಯ", ಆದರೆ 1947ರ ನಂತರ ಆದದ್ದೇನು?

1. ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರ ವೇದಿಕೆಯಾಗಿದ್ದ ಕಾಂಗ್ರೆಸ್ 1947 ಆಗಸ್ಟ್ 15ರಂದು ಸ್ವಾತಂತ್ರ್ಯ ದೊರತ ಕೂಡಲೇ ಪಂಡಿತ್ ನೆಹರು ನಾಯಕತ್ವದಲ್ಲಿ ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿತವಾದುದು ಒಂದು ದುರ್ದೈವದ ಸಂಗತಿ. ಹೀಗಾದಾಗ್ಯೂ, ರಾಷ್ಟ್ರೀಯ ದೃಷ್ಟಿಯಿಲ್ಲದೇ ಮೊಗಲರ, ಬ್ರಿಟಿಷರ ನೀತಿಯನ್ನೇ ಮುಂದುವರಿಸಿಕೊಂಡು ನಡೆಯಲಾರಂಭಿಸಿದ್ದು ಮತ್ತೊಂದು ದುರಂತ. ದೇಶದ ಹೆಸರು, ಭಾಷೆ ಭೂಷಣ ಮೊದಲಾದವುಗಳ ಮೇಲಾಗಿದ್ದ ಸಾಂಸ್ಕೃತಿಕ ಆಕ್ರಮಣದ ಪ್ರಮಾದವನ್ನು ಸರಿಪಡಿಸುವ ಬದಲು, ಆ ತಪ್ಪನ್ನೇ ಇಂದಿಗೂ ಮುಂದುವರಿಸಲಾಗುತ್ತಿದೆ. ಉದಾಹರಣೆಗೆ ಭಾರತ ಎಂದಾಗಬೇಕಾಗಿದ್ದ ದೇಶದ ಹೆಸರು "India that is Bharath" ಆಯಿತು! ಬರ್ಮಾ– ಮ್ಯಾನ್ಮಾರ, ಸಿಲೋನ್– ಶ್ರೀಲಂಕಾ ಆಗಬಹುದಾದರೆ, ಇಂಡಿಯಾ ಏಕೆ ಭಾರತವಾಗಲಿಲ್ಲ? ಇಂಗ್ಲಿಷರು ಭಾರತ ಬಿಟ್ಟು ಹೋದ ನಂತರವೂ ಇಂಡಿಯಾ ಶಬ್ದಕ್ಕೆ ಅಂಟಿಕೊಳ್ಳುವ ಅನಿವಾರ್ಯತೆಯಿತ್ತೇ? ಜೊತೆಗೆ ವಂದೇಮಾತರಂ ರಾಷ್ಟ್ರಗೀತೆಯಾಗಬೇಕಾಗಿತ್ತು. ಆದರೆ ಸರ್ಕಾರಿ ಮಾನ್ಯತೆ ಇಲ್ಲದೆ, ಕೇವಲ ಸಹರಾಷ್ಟ್ರಗಾನ ಏಕಾಯಿತು? ಭಾರತಮಾತಾ ಕಿ ಜಯ್. ನೇಪಥ್ಯಕ್ಕೆ ಸರಿದುಹೋಯಿತು. ಸೆಕ್ಯುಲರ್ ಎಂಬ ಮುಸುಕಿನಲ್ಲಿ ನೈಜರಾಷ್ಟ್ರೀಯತೆ ಗೌಣವಾಗಿ ಹೋಯಿತು. Nationalism ನಲ್ಲಿ ನಾನು ದೇಶಕ್ಕೆ ಏನುಮಾಡಬಲ್ಲೆ? ಎಂಬ ಕರ್ತವ್ಯ ಭಾವವಿದ್ದರೆ, Citizenship ನಲ್ಲಿ ನನ್ನ ದೇಶ ನನಗೇನು ಕೊಡಬೇಕು ಎಂಬ ಹಕ್ಕೊತ್ತಾಯದ ದುರ್ವಾಸನೆ ಇದೆ.

ಈ ದೇಶಕ್ಕಾಗಿ ಪ್ರಾಣತೆತ್ತ ಅಸಂಖ್ಯ ಸ್ವಾತಂತ್ರ್ಯ ಸೇನಾನಿಗಳ ಅಂತಃಕರಣದ ಕೂಗನ್ನು ಕೇಳಿಸಿಕೊಳ್ಳಲೇ ಇಲ್ಲ. ದೇಶಕ್ಕಾಗಿ ನಾವು ಬದುಕಬೇಕು ಎಂಬ ಅವರ ಅಪೇಕ್ಷೆ ಮರೆತು ಹೋಗಿ, ಕ್ರಮೇಣ ರಾಷ್ಟ್ರಭಾವ ದುರ್ಬಲವಾಗುತ್ತಾ ಹೋಯಿತು. ಪ್ರಾದೇಶಿಕವಾದ, ಜಾತಿವಾದ, ಕುಟುಂಬವಾದ ಹಾಗೂ ವ್ಯಕ್ತಿವಾದಗಳೇ ಮುಖ್ಯವಾಗಿ ಹೋದವು.

2. ಸ್ವಾತಂತ್ರ್ಯ ಬಂದ ತರುವಾಯ ಭಾರತದಲ್ಲೇ ಉಳಿದ ಮುಸಲ್ಮಾನರನ್ನು ಮತ್ತು ಕ್ರೈಸ್ತರನ್ನು ಮುಖ್ಯ ರಾಷ್ಟ್ರೀಯ ಪ್ರವಾಹದಲ್ಲಿ ಉಳಿದ ಹಿಂದುಗಳೊಡನೆ ಸಮರಸ ಮಾಡಬೇಕಾದ ಅಗತ್ಯ ಇತ್ತು. ಆದರೆ ರಾಷ್ಟ್ರವನ್ನು ಮೆಜಾರಿಟಿ, ಮೈನಾರಿಟಿ ಎಂದು ಒಡೆದು,

ಪುಟ 9 ಕ್ಕೆ ➢

# ರಾಷ್ಟ್ರೀಯ ಶಿಕ್ಷಣ ನೀತಿ 2020 :ವಿಶ್ವಗುರುವಾಗುವತ್ತ ಭಾರತ




**ಶಿವಾನಂದ ಸಿಂಧನಕೇರಾ**
**ಪ್ರಧಾನ ಕಾರ್ಯದರ್ಶಿಗಳು,**
**ಅ.ಭಾ.ರಾ.ಶೈ ಮಹಾಸಂಘ**


ರಾಷ್ಟ್ರೀಯ ಶಿಕ್ಷಣ ನೀತಿಯು 21 ನೇ ಶತಮಾನದ ಮೊದಲ ಶಿಕ್ಷಣ ನೀತಿಯಾಗಿದೆ. ನೀತಿಯು ದೇಶವನ್ನು ಅಭಿವೃದ್ಧಿ ಕಡೆಗೆ ಕೊಂಡೊಯ್ಯುವುದಾಗಿದೆ ಮತ್ತು ಅಭಿವೃದ್ಧಿ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸುವ ಗುರಿಯನ್ನು ಹೊಂದಿದೆ. ಈ ನೀತಿಯು ಭಾರತದ ಸಂಸ್ಕೃತಿ, ಪರಂಪರೆ, ಜ್ಞಾನ ಮತ್ತು ಜೀವನ ಮೌಲ್ಯಗಳನ್ನು ಬಲಗೊಳಿಸುತ್ತದೆ. ಸುಸ್ಥಿತ ಅಭಿವೃದ್ಧಿ ಗುರಿ 4 –(SDG 4) UNESCO ನೀಡಿರುವ ವ್ಯಾಖ್ಯಾನದಂತೆ, ನೀತಿಯು ಪ್ರತಿಯೊಬ್ಬ ವ್ಯಕ್ತಿಯ ಸೃಜನಶೀಲ ಸಾಮರ್ಥ್ಯದ ಅಭಿವೃದ್ಧಿಗೆ ಒತ್ತು ನೀಡುತ್ತದೆ. ಈ ನೀತಿಯು ಅಕ್ಷರಜ್ಞಾನ, ಗಣಿತ ಕೌಶಲ್ಯವನ್ನು ಒಳಗೊಂಡ **"ತಳಹದಿ ಸಾಮರ್ಥ್ಯಗಳು"**, ವಿಮರ್ಶಾತ್ಮಕ ಚಿಂತನೆ ಹಾಗೂ ಸಮಸ್ಯೆ ಬಗೆಹರಿಸುವಂತಹ ಉನ್ನತ ಜ್ಞಾನಾತ್ಮಕ ಸಾಮರ್ಥ್ಯಗಳನ್ನು ಮಾತ್ರವಲ್ಲದೆ ಸಾಮಾಜಿಕ, ನೈತಿಕ ಮತ್ತು ಭಾವನಾತ್ಮಕ ಸಾಮರ್ಥ್ಯಗಳನ್ನು ಭವಿಷ್ಯದ ಭಾರತದ ವಿದ್ಯಾರ್ಥಿಗಳನ್ನು ತಯಾರು ಮಾಡುವ ತತ್ವವನ್ನು ಹೊಂದಿದೆ.

ಶರೀರ, ಬುದ್ಧಿ, ಮನಸ್ಸು ಮತ್ತು ಆಧ್ಯಾತ್ಮ ಆಧಾರಿತ ಭಾರತೀಯ ಜ್ಞಾನ ಮತ್ತು ಚಿಂತನೆಯ ಪರಂಪರೆಯು ಈ ನೀತಿಗೆ ದಾರಿದೀಪವಾಗಿದೆ. ಪ್ರಾಚೀನ ಭಾರತದ ಶಿಕ್ಷಣದ ಗುರಿಯು ಕೇವಲ ಪ್ರಸ್ತುತ ಜೀವನಕ್ಕೆ ಅಥವಾ ಶಾಲಾ ಶಿಕ್ಷಣದ ನಂತರದ ಜೀವನಕ್ಕೆ ಸಿದ್ಧಪಡಿಸಲು ಜ್ಞಾನವನ್ನು ಪಡೆಯುವುದಾಗಿರಲಿಲ್ಲ, ಬದಲಾಗಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದಿಂದ ಆತ್ಮಸಾಕ್ಷಾತ್ಕಾರ ಮತ್ತು ಸ್ವಯಂ ಏಳಿಗೆಗಾಗಿ ಸಿದ್ಧಪಡಿಸುವುದಾಗಿತ್ತು. ಭಾರತದ ಗುರುಕುಲಗಳು ಮತ್ತು ಹೆಸರಾಂತ ವಿಶ್ವವಿದ್ಯಾಲಯಗಳಾದ ತಕ್ಷಶಿಲಾ, ನಳಂದಾ, ವಿಕ್ರಮಶಿಲಾ, ವಲ್ಲಭಿಯಂತಹ ಸಂಸ್ಥೆಗಳು ಬಹುವಿಷಯದ ಬೋಧನೆ ಮತ್ತು ಸಂಶೋಧನೆಯ ಉನ್ನತ ಗುಣಮಟ್ಟವನ್ನು ಸಾಧಿಸಿದ್ದವು.

ಭಾರತೀಯ ಶಿಕ್ಷಣ ವ್ಯವಸ್ಥೆಯ ಚರಕ, ಸುಶ್ರುತ, ಆರ್ಯಭಟ, ವರಾಹಮಿಹಿರ, ಭಾಸ್ಕರಾಚಾರ್ಯ, ರೋಹಿಣಿ, ಬ್ರಹ್ಮಗುಪ್ತ, ಚಾಣಕ್ಯ, ಚಕ್ರಪಾಣಿದತ್ತ, ಮಾಧವ, ಪಾಣಿನಿ, ಪತಂಜಲಿ, ನಾಗಾರ್ಜುನ, ಗೌತಮ, ಪಿಂಗಳ, ಶಂಕರದೇವ, ಮೈತ್ರೇಯಿ, ಗಾರ್ಗಿ, ಶಂಕರಾಚಾರ್ಯ, ಬಸವೇಶ್ವರ, ತಿರುವಳ್ಳುವರ್ ಮತ್ತು ಸರ್ವಜ್ಞರಂತಹ ಶ್ರೇಷ್ಠ ವಿದ್ವಾಂಸರನ್ನು ರೂಪಿಸಿದೆ. ಗಣಿತ, ಖಗೋಳವಿಜ್ಞಾನ, ಲೋಹಶಾಸ್ತ್ರ, ಆಯುರ್ವೇದ, ಶಸ್ತ್ರಚಿಕಿತ್ಸೆ, ಯೋಗವಿಜ್ಞಾನ, ಕಟ್ಟಡ ತಂತ್ರಜ್ಞಾನ, ವಾಸ್ತುಶಾಸ್ತ್ರ, ಹಡಗುನಿರ್ಮಾಣ, ಕೃಷಿವಿಜ್ಞಾನ, ಲಲಿತಕಲೆಗಳು, ಚದುರಂಗ, ಸಂಸ್ಕೃತ, ವ್ಯಾಕರಣ, ಭಾರತೀಯ ಭಾಷಾಶಾಸ್ತ್ರಗಳು ಮತ್ತು ಇನ್ನಿತರೆ ಕ್ಷೇತ್ರಗಳಲ್ಲಿ ಅವರುಗಳು ಜ್ಞಾನ ಪ್ರಪಂಚಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಭಾರತೀಯ ಸಂಸ್ಕೃತಿ ಮತ್ತು ತತ್ವಶಾಸ್ತ್ರವು ಪ್ರಪಂಚದ ಮೇಲೆ ಬಲವಾದ ಪ್ರಭಾವ ಹೊಂದಿತ್ತು. ಈ ನೀತಿಯಿಂದ ಈ ಎಲ್ಲಾ ಸಂಗತಿಗಳನ್ನು ಶಿಕ್ಷಣ ವ್ಯವಸ್ಥೆ ಮೂಲಕ ಜಾರಿಗೊಳಿಸುತ್ತಾ, ಹೊಸ ರೀತಿಯಲ್ಲಿ ಉಪಯೋಗಿಸುತ್ತಾ ಅಭಿವೃದ್ಧಿಪಡಿಸುವಲ್ಲಿ ಸಹಕಾರಿಯಾಗಲಿದೆ.

ಈ ಶಿಕ್ಷಣ ನೀತಿಯು ಎಲ್ಲರಿಗೂ ಉನ್ನತ ಗುಣಮಟ್ಟದ ಶಿಕ್ಷಣವನ್ನು ಕೊಡುವುದರ ಮೂಲಕ ಭಾರತವನ್ನು ಸಮತೆಯುಳ್ಳ ಮತ್ತು ಚಲನಶೀಲ ಜ್ಞಾನ ಸಮಾಜವನ್ನಾಗಿ ಪರಿವರ್ತಿತರಾಗುವುದರೊಂದಿಗೆ ಬಲಶಾಲಿ ರಾಷ್ಟ್ರವನ್ನಾಗಿಸಲು ಕೊಡುಗೆ ನೀಡುವ ಆಶಯವನ್ನು ಹೊಂದಿದೆ. ಈ ನೀತಿಯು ನಮ್ಮ ಶಿಕ್ಷಣ ಸಂಸ್ಥೆಗಳ ಪಠ್ಯಕ್ರಮ ಮತ್ತು ಬೋಧನಾ ವಿಧಾನವು ವಿದ್ಯಾರ್ಥಿಗಳಲ್ಲಿ ಮೂಲಭೂತ ಕರ್ತವ್ಯಗಳು ಮತ್ತು ಭಾರತದ ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಅಪಾರ ಮತ್ತು ಆಳವಾದ ಗೌರವ ಮತ್ತು ಬದಲಾಗುತ್ತಿರುವ ಜಗತ್ತಿನಲ್ಲಿ ನಮ್ಮ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವ ದೃಷ್ಟಿಕೋನ ಹೊಂದಿದೆ. ಈ ನೀತಿಯು ಸುಸ್ಥಿರ ಅಭಿವೃದ್ಧಿ ಮತ್ತು ಜೀವನ ಹಾಗೂ ಜಾಗತಿಕ ಕಲ್ಯಾಣವನ್ನು ಬೆಂಬಲಿಸುವುದರೊಂದಿಗೆ ಜಾಗತಿಕ ನಾಗರಿಕರನ್ನಾಗಿಸುವ ದೃಷ್ಟಿಕೋನ ಹೊಂದಿದೆ.

## ಶಾಲಾಶಿಕ್ಷಣದ ಪ್ರಮುಖ ಅಂಶಗಳು

1. ಈ ನೀತಿಯು ಮಗುವಿನ ಬೆಳವಣಿಗೆ ಸಮಗ್ರರೀತಿಯಲ್ಲಿ ಆಗಬೇಕು ಅಂದರೆ ಬೌದ್ಧಿಕವಾಗಿ, ಸಾಮಾಜಿಕವಾಗಿ, ಭೌತಿಕವಾಗಿ, ನೈತಿಕವಾಗಿ ಮತ್ತು ಭಾವನಾತ್ಮಕವಾಗಿ ತಯಾರು ಆಗಬೇಕು.
2. ಈ ನೀತಿಯು ಮಗುವಿನ ಪ್ರಾರಂಭಿಕ ಬೆಳವಣಿಗೆ ಮತ್ತು ಆರೈಕೆ ಅಲ್ಲಿ ಪಡೆಯುವ ಶಿಕ್ಷಣದ ಪಠ್ಯಕ್ರಮದಲ್ಲಿ ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಕಲೆ, ಬಹುಭಾಷೆಗಳು, ಆಟಗಳು ಮತ್ತು ಕೌಶಲ್ಯಗಳು ಅಳವಡಿಸುವುದರಿಂದ ಮುಂದಿನ ಜೀವನಕ್ಕೆ ಭದ್ರ ಬುನಾದಿ ಹಾಕಿದಂತಾಗುತ್ತದೆ.
3. ಈ ನೀತಿಯು ಶಿಕ್ಷಣದಲ್ಲಿ ಕಲೆ, ವಿಜ್ಞಾನ ಅಥವಾ ಶೈಕ್ಷಣಿಕ ವಿಷಯಗಳು, ವೃತ್ತಿಪರತೆ, ಕೌಶಲ್ಯಗಳು ಅಥವಾ ಪಠ್ಯಚಟುವಟಿಕೆಗಳು ಮತ್ತು ಪಠ್ಯೇತರ ಚಟುವಟಿಕೆಗಳು ಮತ್ತು ಆಟಗಳು ಬೇರೆ ಬೇರೆ ಎನ್ನುವುದನ್ನು ಹೇಳುವುದಿಲ್ಲ, ವ್ಯಕ್ತಿಯ ಪರಿಪೂರ್ಣವಿಕಾಸಕ್ಕೆ ಮತ್ತು ಜೀವನಕ್ಕೆ ಬೇಕಾದ ಶಿಕ್ಷಣ ನೀಡುತ್ತದೆ. ಈ ನೀತಿಯು ಕಲಿಕೆಯಲ್ಲಿ ನಿರಂತರತೆಯನ್ನು ಒದಗಿಸುತ್ತದೆ.
4. ಈ ನೀತಿಯು ವಿದ್ಯಾರ್ಥಿಗಳಿಗೆ ಇಷ್ಟವಾಗುವ, ಕಲಿಯಲು ಆಸಕ್ತಿ ಉಂಟುಮಾಡುವ ವಿಷಯಗಳ ಆಯ್ಕೆಗೆ ಅಂದರೆ ಕಲೆ, ಮಾನವಿಕ, ವಿಜ್ಞಾನ, ಆಟಗಳು, ಸಂಗೀತ ಮತ್ತು ವೃತ್ತಿಪರ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಮುಕ್ತತೆ ಹಾಗು ಅವಕಾಶವಿದೆ.
5. ಈ ನೀತಿಯು ಶಾಲಾಹಂತದಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷೆಗೊಳಪಡಿಸುವ ಪದ್ಧತಿಯಿಂದ ಬದಲಾವಣೆ ಮಾಡಿ ನಿರಂತರ ಕಲಿಯುತ್ತಾ ಮತ್ತು ಅರ್ಥಮಾಡಿಕೊಳ್ಳುತ್ತಾ ಅಂದರೆ ಬಾಯಿಪಾಠ (Rote learning) ಮಾಡುವ ಬದಲು ವಿಷಯಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸುವಂತಹುದು.

## ಶಾಲಾ ಶಿಕ್ಷಣದ ಕ್ರಮ 10+2 ರ ಬದಲಾಗಿ 5+3+3+4 ರಂತೆ ಬದಲಾವಣೆ

ಪಠ್ಯಕ್ರಮ ಮತ್ತು ಶಿಕ್ಷಣಶಾಸ್ತ್ರದಿಂದ ಶಾಲಾ ಹಂತದ ಶಿಕ್ಷಣವು (15 ವರ್ಷಗಳು) ನಾಲ್ಕು ಭಾಗಗಳಾಗಿ ಅಂದರೆ 5+3+3+4 ವಿಂಗಡಿಸಿದೆ.

**1. ಬುನಾದಿ ಹಂತ (ಮೂರು ವರ್ಷಗಳ ಶಿಶುವಿಹಾರ+ತರಗತಿ 1 ಮತ್ತು 2) ವಯಸ್ಸು: 3 ರಿಂದ 8 ವರ್ಷಗಳು** – ಈ ಹಂತದಲ್ಲಿ ಮಗುವಿನ ಬೆಳವಣಿಗೆ ಬಹಳ ಪ್ರಮುಖವಾದುದು. ಮಗುವಿಗೆ ಹೊಂದಿಕೊಳ್ಳುವ, ಬಹುಮಟ್ಟದ, ಆಟದ ಮೂಲಕ, ಕಥೆಗಳ ಮೂಲಕ ಅತ್ಯಂತ ಉನ್ನತ ಗುಣಮಟ್ಟದ ಅಕ್ಷರಜ್ಞಾನ, ಭಾಷಾಜ್ಞಾನ ಮತ್ತು ಸಂಖ್ಯಾಜ್ಞಾನವನ್ನು ನೀಡುವುದು.

**ಪುಟ 9 ಕ್ಕೆ ➤**

ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. – ಬಸವಣ್ಣ

➢ ಪುಟ 4 ರಿಂದ.....

ಘಟನೆಗಳು, ಒಂದಷ್ಟು ಕುಟುಂಬಗಳು ಅನುಭವಿಸಿದ ದಾರುಣಹಿಂಸೆ ಎಲ್ಲವೂ ಸತ್ಯವಾಗಿ ಅಲ್ಲಿ ನಡೆದ ಅನ್ಯಾಯದ ಸ್ಯಾಂಪಲ್‌ಗಳಷ್ಟೇ. ಸಾಮಾಜಿಕ ಜಾಲತಾಣಗಳಲ್ಲಿ ಹಲವಾರು ಕಶ್ಮೀರೀ ಪಂಡಿತರ ಸಂದರ್ಶನದ ಮೂಲಕ ತಿಳಿದುಬರುತ್ತಿರುವ ಸಂಗತಿಗಳು ನಾಗರಿಕ ಸಮಾಜ ತಲೆತಗ್ಗಿಸುವಂತಿವೆ. ಅಷ್ಟೊಂದು ಅನ್ಯಾಯ ನಡೆದಿದ್ದರೂ ಯಾರೂ, ಯಾವ ರೀತಿಯಲ್ಲಿಯೂ ಆ ಬಲಿಪಶುಗಳ ದುಃಖಕ್ಕೆ, ಕಷ್ಟಕ್ಕೆ ಸ್ಪಂದಿಸಲಿಲ್ಲವೇಕೆಂದು ಪರಿತಪಿಸುವಂತಾಗುತ್ತದೆ. 'ಒಂದು ಸಿನಿಮಾ ಅಲ್ಲ, ಪ್ರತಿಯೊಂದು ಮನೆಯ ವಿಷಯವನ್ನು ಪ್ರತ್ಯೇಕ ಸಿನಿಮಾ ಮಾಡುವಂತಿದೆ' ಎಂಬ ಮಾತು ಅವರ ಸಂಕಟವನ್ನು ವ್ಯಕ್ತಪಡಿಸುತ್ತದೆ. ರಾಜಕೀಯ ಶಕ್ತಿಗಳು ಕೂಡ ಈ ಮೂವತ್ತೆರಡು ವರ್ಷಗಳು ಮತದ ರಾಜಕೀಯ ಮಾಡುತ್ತ ಅವರೆಲ್ಲರ ರಕ್ಷಣೆ, ಸಹಾಯದ ಬಗೆಗೆ ಜಾಣ ಮೌನವನ್ನೋ, ನಿರ್ಲಕ್ಷ್ಯವನ್ನೋ ತಳೆದಿದ್ದವೆಂದರೆ ಏನು ಹೇಳಲು ಸಾಧ್ಯ?

ಮತಾಂಧತೆ ಎಂಬುದು ಮನುಷ್ಯನನ್ನು ಪಶುವಿಗಿಂತಲೂ ಕಡೆಯಾಗಿ ಮಾಡುತ್ತದೆಯೆನ್ನುವುದಕ್ಕೆ ದಶಕಗಳಿಂದಲೂ ಕಶ್ಮೀರದಲ್ಲಿ ಪಂಡಿತರ ಮೇಲೆ ನಡೆಯುತ್ತಿರುವ ದೌರ್ಜನ್ಯವೇ ನಿದರ್ಶನ. ಇಂದಿಗೂ ಅವರೆಲ್ಲರೂ ತಮ್ಮ ತಾಯ್ನೆಲದಲ್ಲಿ ಧೈರ್ಯವಾಗಿ ತಲೆಯೆತ್ತಿ ಬದುಕಲು ಸಾಧ್ಯವೇ ಎಂಬ ಅಳುಕನ್ನೇ ವ್ಯಕ್ತಪಡಿಸುತ್ತಿರುವುದು ಸುದೀರ್ಘಕಾಲ ಆಕ್ರಮಣಕ್ಕೆ ಗುರಿಯಾಗಿರುವುದರ ಪರಿಣಾಮವೇ ಆಗಿದೆ.

'ಕಾಶ್ಮೀರ ಫೈಲ್ಸ್' ಚಿತ್ರ ಎಲ್ಲರಲ್ಲಿ ಮಾನವೀಯತೆಯನ್ನು ಎಚ್ಚರಗೊಳಿಸುವುದರೊಂದಿಗೆ, ರಾಜಕಾರಣಿಗಳ ಸ್ವಾರ್ಥ, ಅಧಿಕಾರಲಾಲಸೆ, ಪಲಾಯನವಾದ ಎಲ್ಲದರ ಅರಿವು ಮೂಡಿಸುತ್ತದೆ. ನಮ್ಮ ದೇಶಬಾಂಧವರ ಕಾಳಜಿ ವಹಿಸುವಲ್ಲಿ ನಡೆಸಬೇಕಿದ್ದ ಕರ್ತವ್ಯದ ಅರಿವು ಮೂಡಿಸುತ್ತದೆ. ನಮ್ಮ ದೇಶಬಾಂಧವರ ಕಾಳಜಿವಹಿಸುವಲ್ಲಿ ನಡೆದ ಕರ್ತವ್ಯಲೋಪವನ್ನು ನೆನಪಿಸುತ್ತದೆ.

➢ ಪುಟ 8 ರಿಂದ.....

**2. ಸಿದ್ಧತಾ ಹಂತ (ತರಗತಿ: 3, 4 ಮತ್ತು 5 – ವಯಸ್ಸು: 8 ರಿಂದ 11 ವರ್ಷಗಳು)** – ಈ ಹಂತದಲ್ಲಿ ಮಗುವಿಗೆ ಕಂಡುಹಿಡಿಯುವ ಮತ್ತು ಚಟುವಟಿಕೆಗಳ ಮೂಲಕ, ತರಗತಿಯಲ್ಲಿ ಚರ್ಚಿಸುವ ಮೂಲಕ, ಓದಲು, ಬರೆಯಲು, ಮಾತನಾಡಲು, ಲೆಕ್ಕ ಮಾಡಲು, ಶಾರೀರಿಕ ಶಿಕ್ಷಣ, ಕಲೆ, ಭಾಷೆ, ವಿಜ್ಞಾನ, ಸಮಾಜವಿಜ್ಞಾನ ಮತ್ತು ಗಣಿತದ ವಿಷಯಗಳ ಬಗ್ಗೆ ಭದ್ರವಾದ ಶಿಕ್ಷಣ ನೀಡುವುದು.

**3. ಮಧ್ಯಮ ಹಂತ : (ತರಗತಿ: 6, 7 ಮತ್ತು 8 – ವಯಸ್ಸು : 11 ರಿಂದ 14 ವರ್ಷಗಳು)** – ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಷಯ ಶಿಕ್ಷಕರ ಮೂಲಕ ವಿವಿಧ ವಿಷಯಗಳನ್ನು ಬಲವಾಗಿ ಅರ್ಥೈಸಿಕೊಳ್ಳುವ, ಧನಾತ್ಮಕವಾಗಿ ಚಿಂತನೆ ಮಾಡುವ, ವೃತ್ತಿಪರ ಕೌಶಲ್ಯಗಳನ್ನು ಬೆಳೆಸುವ, ವಿಮರ್ಶಾತ್ಮಕ ಚಿಂತನೆ ಮತ್ತು ವಿಶ್ಲೇಷಣಾತ್ಮಕ ಚಿಂತನೆಯನ್ನು ಬೆಳೆಸುವುದು. ಕಲೆ, ಸಂಗೀತ, ಕೃಷಿ ಮತ್ತು ವಿವಿಧ ಕೌಶಲ್ಯಗಳನ್ನು ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ನೀಡುವುದು.

**4. ಪ್ರೌಢಹಂತ (ತರಗತಿ : 9, 10, 11 ಮತ್ತು 12 – ವಯಸ್ಸು : 14 ರಿಂದ 18 ವರ್ಷಗಳು)** – ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ಬಹುಶಿಸ್ತಿನ (Multidisciplinary) ಶಿಕ್ಷಣ ಮತ್ತು ವಿಷಯದ ಆಳ ಹಾಗೆಯೇ ವಿಶ್ಲೇಷಣಾತ್ಮಕ ಚಿಂತನೆಗೆ ಗಮನ ಹರಿಸುವುದು, ಮುಂದಿನ ಭವಿಷ್ಯದ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಮತ್ತು ವಿದ್ಯಾರ್ಥಿಗಳಿಗೆ ವಿಷಯದ ಆಯ್ಕೆಗೆ ಅವಕಾಶ ನೀಡುವುದು. ಜೀವನದಲ್ಲಿ ರಚನಾತ್ಮಕ ಬದಲಾವಣೆ, ಹಂತ ಹಂತ ಬದಲಾವಣೆಗೆ ಒತ್ತು ಕೊಡುವುದು. ●

➢ ಪುಟ 6 ರಿಂದ.....

ಗುಣಮಟ್ಟವನ್ನು ಕಾಪಾಡಿಕೊಳ್ಳುವ, ಕೌಶಲ್ಯಗೊಳ್ಳುವ (Skilling) ಹಾಗು ಅಕೌಶಲ್ಯಗೊಳ್ಳುವ (deskilling) ದೃಷ್ಟಿಕೋನವು ಉದ್ದೇಶವನ್ನು ಸೃಷ್ಟಿಸಲು ಹಾಗು ಅದನ್ನು ಉಳಿಸಿಕೊಳ್ಳುವುದು ಮುಖ್ಯವಾಗುತ್ತದೆ. HEI ಗಳು ಪದವಿಪೂರ್ವ ಮತ್ತು ಔದ್ಯೋಗಿಕ ಶಿಕ್ಷಣದ ಆನ್‌ಲೈನ್ ಕೋರ್ಸುಗಳನ್ನು ಸಾಂಪ್ರದಾಯಿಕ ಬೋಧನೆಯೊಂದಿಗೆ ಸಮ್ಮಿಶ್ರಗೊಳಿಸಬಹುದಾಗಿದೆ. HEI ಗಳು ದತ್ತಾಂಶ ಅನೋಟೇಷನ್ (Data annotation), ಚಿತ್ರ ವರ್ಗೀಕರಣ (Image Classification) ಮತ್ತು ವಾಕ್ ಲಿಪ್ಯಂತರ (Speech transcription) ನಂತಹ AI ಪ್ರಕ್ರಿಯೆಗಳಿಗೆ ನೆರವು ನೀಡುವ ಸಲುವಾಗಿ ಕಡಿಮೆ ಪರಿಣತಿಯ ಕಾರ್ಯಗಳಲ್ಲಿ ಗುರಿ ನಿರ್ದೇಶಿತ ತರಬೇತಿ ಆರಂಭಿಸಬಹುದು. ಶಾಲಾ ಮಕ್ಕಳಿಗೆ ಭಾಷೆಗಳನ್ನು ಕಲಿಸುವ ಪ್ರಯತ್ನಗಳನ್ನು ಭಾರತದ ವಿವಿಧ ಭಾಷೆಗಳು (Natural Language Processing for India's) ಭಾರತದ ಸಹಜ ಭಾಷೆಗಳು ಸಂಶ್ಲೇಷಣೆಯನ್ನು ಹೆಚ್ಚಿಸುವ ಪ್ರಯತ್ನದೊಂದಿಗೆ ಸಂಯೋಜಿಸಲಾಗುವುದು.

ಶಾಲಾ ಮಟ್ಟದಲ್ಲಿ ಪ್ರಚಲಿತ ವಿದ್ಯಮಾನಗಳು ಹಾಗೂ ನೈತಿಕ ವಿಷಯಗಳು ಸೇರಿದಂತೆ ನಿರಂತರ ಶಿಕ್ಷಣಕ್ಕೆ ಸೂಕ್ತ ಬೋಧನಾ ಮತ್ತು ಚರ್ಚೆ ಸಾಮಗ್ರಿಗಳನ್ನು NETF ಮತ್ತು MHRD ಸಿದ್ಧಪಡಿಸುವುದು. ದತ್ತಾಂಶ ನಿರ್ವಹಣೆ ಹಾಗೂ ದತ್ತಾಂಶ ಸಂರಕ್ಷಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಖಾಸಗಿತನ, ಕಾನೂನುಗಳು ಮತ್ತು ಪ್ರಮಾಣೀಕರಿಸಿದ ವಿಷಯಗಳ ಕುರಿತು ಅರಿವು ಅವಶ್ಯವಿದೆ ಮತ್ತು ನೈತಿಕ ವಿಷಯಗಳ ಬಗ್ಗೆ ಗಮನಿಸುವುದು ಅಗತ್ಯವಿದೆ. ಈ ತಾಂತ್ರಿಕತೆಯ ಪ್ರಯೋಗ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ರೀತಿಯಲ್ಲಿ ಬದಲಾವಣೆಯಾಗುವುದು.

ಬೋಧಕನಿಗೆ ಪರ್ಯಾಯವಾಗಿ ತಂತ್ರಜ್ಞಾನ ಅಲ್ಲದಿದ್ದರು, ಬೋಧನೆಯಲ್ಲಿ ಮತ್ತು ಕಲಿಕಾರ್ತಿಯಲ್ಲಿ ಗುಣಮಟ್ಟ ಹೆಚ್ಚಿಸಲು ತಂತ್ರಜ್ಞಾನ ಸಹಾಯಕವಾಗಿದೆ. ನಮ್ಮ ಅವಶ್ಯಕತೆಗೆ ಅನುಗುಣವಾಗಿ ತಂತ್ರಜ್ಞಾನದ ಬಳಕೆ ಶೈಕ್ಷಣಿಕ ಪ್ರಗತಿಗೆ ಪೂರಕವಲ್ಲವೆ? ●

➢ ಪುಟ 7 ರಿಂದ.....

ಮೈನಾರಿಟಿಗೆ ವಿಶೇಷ ಸವಲತ್ತುಗಳು ಮತ್ತು ಮೆಜಾರಿಟಿಗೆ ವಿಶೇಷ ನಿರ್ಬಂಧ! ಹೀಗೆ ಹಿಂದುಗಳ ಕಣ್ಣಿಗೆ ಸುಣ್ಣ, ಮುಸ್ಲಿಂ, ಕ್ರೈಸ್ತರ ಪಾಲಿಗೆ ಬೆಣ್ಣೆ– ಇಂಥ ಓಲೈಕೆ ರಾಜಕಾರಣ ಮುಂದುವರಿದು, ಓಟ್ ಬ್ಯಾಂಕ್ ರಾಜಕಾರಣವಾಗಿ ಹೋಯಿತು. ಸೆಕ್ಯುಲರಿಸಂ ಅಂದರೆ ಅಲ್ಪ ಸಂಖ್ಯಾತರ ತುಷ್ಟೀಕರಣ ಮತ್ತು ಹಿಂದುಗಳನ್ನು ಜಾತಿ ಜಾತಿಗಳಲ್ಲಿ ಒಡೆಯುವ ದುರ್ನೀತಿ ಆಯಿತು. "ಪರಿಣಾಮ ಇಂಡಿಯಾ ದಟ್ ಈಸ್ ಭಾರತ್" ನಲ್ಲಿ ಅಲ್ಪಸಂಖ್ಯಾತರ ರಾಷ್ಟ್ರೀಕರಣವಾಗಲೇ ಇಲ್ಲ. ಬದಲಾಗಿ ಅಲ್ಪಸಂಖ್ಯಾತರ ಓಟು ಇಲ್ಲದೆ ಚುನಾವಣೆಯಲ್ಲಿ ಗೆಲ್ಲುವುದು ಅಸಾಧ್ಯ ಎಂಬ ದುರ್ಬಲ ಮಾನಸಿಕತೆ ದೇಶವನ್ನು ಆವರಿಸಿತು. ದೇಶದಲ್ಲಿ ಮತೀಯ ಶಾಂತಿ ಸೌಹಾರ್ದತೆ ಮುಂತಾದವು ಕೇವಲ ಭಾಷಣದ ಬಿಂದುಗಳಾಗಿ. ಉಗ್ರವಾದ, ಮತೀಯ ದಂಗೆಗಳ ಸರಣಿಯೇ ಆರಂಭವಾಯಿತು.

3. ಭಾರತದ ಪುನರ್ನಿರ್ಮಾಣಕ್ಕಾಗಿ ಬದುಕುವ ಅದರಲ್ಲೇ ಸಾರ್ಥಕತೆ ಕಾಣುವ ಹಿಂದು ಕಮ್ಯುನಲ್' ಆಗಿ ಹೋದ. ಸೆಕ್ಯುಲರ್ ವಿರೋಧಿ ಹಾಗೂ ಸಂಕುಚಿತ ಎಂಬ ಹಣೆ ಪಟ್ಟಿಯನ್ನು ಅವನಿಗೆ ಕಟ್ಟಲಾಯಿತು. ಹಿಂದು ಐಡೆಂಟಿಟಿ ಅಪರಾಧವಾಗಿ ಹೋದರೆ, ಜಾತಿ ಐಡೆಂಟಿಟಿ ರಾಜಕೀಯ ದುರ್ಬಳಕೆಯ ಶಕ್ತಿಯಾಗಿ ಹೊರಹೊಮ್ಮಿತು. ●

ನನಗೆ ಪರಮಾಶ್ರಯವೆಂದರೆ ನನ್ನ ಗುರುವಿನ ಪಾದಗಳು ಮಾತ್ರ. – ಶಂಕರಾಚಾರ್ಯ

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ



**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

## ಶ್ರೇಷ್ಠ ದೇಶಭಕ್ತ ಡಾ॥ ಬಾಬು ರಾಜೇಂದ್ರ ಪ್ರಸಾದ್

ರಾಜೇಂದ್ರ ಪ್ರಸಾದರು ಓರ್ವ ಸ್ವಾತಂತ್ರ್ಯಯೋಧ, ಶ್ರೇಷ್ಠ ನ್ಯಾಯವಾದಿ, ಮಹಾತ್ಮಗಾಂಧೀಜಿಯವರ ನಿಷ್ಠಾವಂತ ಅನುಯಾಯಿ, ರಾಜಕಾರಿಣಿ ಹಾಗೂ ನಮ್ಮ ಸ್ವತಂತ್ರ ಭಾರತದ ಮೊದಲ ರಾಷ್ಟ್ರಪತಿಯಾಗಿದ್ದರು. ತಮ್ಮ ಬದುಕಿನಲ್ಲಿ ಇವರು ಯಾವುದೇ ಸ್ಥಾನಮಾನಗಳಿಗೆ ಆಸೆ ಪಟ್ಟವರಲ್ಲ. ಎಲ್ಲವೂ ಅದಾಗೇ ಇವರಿಗೆ ಪ್ರಾಪ್ತವಾಯಿತು.

ರಾಜೇಂದ್ರ ಪ್ರಸಾದರದು ರೈತ ಕುಟುಂಬ. ಬಿಹಾರ ರಾಜ್ಯದ ಸರಣ್‌ಜಿಲ್ಲೆಯ ಜೀರಾದೇಯಿ ಗ್ರಾಮದಲ್ಲಿ 1884 ಡಿಸೆಂಬರ್ 3 ರಂದು ಇವರ ಜನನವಾಯಿತು. ಇವರ ತಂದೆ ಮಹಾದೇವ ಸಹಾಯ್, ತಾಯಿ ಕಮಲೇಶ್ವರಿ ದೇವಿ. ತಾಯಿಯು ಬಾಲ್ಯದಲ್ಲಿ ರಾಮಾಯಣದ ಕಥೆಗಳನ್ನು ಮಗುವಿಗೆ ಹೇಳುತ್ತಿದ್ದರು. ಪ್ರಾಥಮಿಕ, ಪ್ರೌಢಶಿಕ್ಷಣ, ಪದವಿ ನಂತರ ಎಂ.ಎ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಿಕ್ಷಕರಾದರು ಮತ್ತು ಬಿ.ಎಲ್ ಶಿಕ್ಷಣ ಪೂರೈಸಿ ಕಲ್ಕತ್ತದಲ್ಲಿ ವಕೀಲ ವೃತ್ತಿ ಆರಂಭಿಸಿದರು. ಕಾನೂನನ್ನು ಚೆನ್ನಾಗಿ ಕರಗತ ಮಾಡಿಕೊಂಡು ಉತ್ತಮ ನ್ಯಾಯವಾದಿಗಳಾಗಿದ್ದರು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವ ಸಲುವಾಗಿ ವಕೀಲ ವೃತ್ತಿಗೆ ತಿಲಾಂಜಲಿ ನೀಡಿದರು. ಗಾಂಧೀಜಿಯವರ ಅಸಹಕಾರ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅನೇಕ ಬಾರಿ ಜೈಲು ಶಿಕ್ಷೆಯನ್ನು ಅನುಭವಿಸಿದರು. ಬಿಹಾರದಲ್ಲಿ ಪ್ರವಾಹದ ಹಾವಳಿಗೆ ತುತ್ತಾದ ಜನರಿಗೆ ಸಾಂತ್ವನ ಹೇಳಿ ಜೀವನಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಸಂಗ್ರಹಿಸಿ ವಿತರಿಸಿದ್ದರು. "ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ" ಎಂಬ ಚಳುವಳಿಯಲ್ಲಿ ಇವರು ಮುಂಚೂಣಿಯಲ್ಲಿದ್ದರು.

ನಮ್ಮ ಭಾರತವು ಸ್ವಾತಂತ್ರ್ಯ ಪಡೆದ ಮೇಲೆ ಕೃಷಿ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಭಾರತದ ಗಣರಾಜ್ಯದ ಪ್ರಥಮ ರಾಷ್ಟ್ರಪತಿಯಾಗಿ ರಾಜೇಂದ್ರ ಪ್ರಸಾದರು ಆಯ್ಕೆಯಾದರು. ಈ ಹುದ್ದೆಯ ಘನತೆಗೆ ತಕ್ಕಂತೆ ನಡೆದುಕೊಂಡು ಸರಳ ಜೀವನವನ್ನು ನಡೆಸಿದರು. ರಾಷ್ಟ್ರದ ಗೌರವಕ್ಕೆ, ಶಾಂತಿಗೆ ಧಕ್ಕೆ ಬಾರದಂತೆ ಕರ್ತವ್ಯ ನಿರ್ವಹಿಸಿದರು. ಇವರ ಶ್ರೇಷ್ಠ ಕಾರ್ಯಗಳಿಗಾಗಿ ಭಾರತ ಸರ್ಕಾರದಿಂದ "ಭಾರತ ರತ್ನ" ಪ್ರಶಸ್ತಿ ದೊರೆಯಿತು.

ಡಾ॥ ಬಾಬು ರಾಜೇಂದ್ರ ಪ್ರಸಾದರ ಹೆಸರು ಸ್ವಾತಂತ್ರ್ಯದ ಪುಟಗಳಲ್ಲಿ ಅಜರಾಮರವಾಗಿದೆ. ದೇಶದ ಸೇವೆಯನ್ನು ನಿಸ್ವಾರ್ಥ ಮನಸ್ಸಿನಿಂದ ಮಾಡುವುದು ಇವರ ಜೀವನದ ಗುರಿಯಾಗಿತ್ತು. ಇದನ್ನು ಪೂರೈಸಿ ಜೀವನದುದ್ದಕ್ಕೂ ಆದರ್ಶ ವ್ಯಕ್ತಿಯಾಗಿ ಬಾಳಿದರು.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ಕರ್ನಾಟಕ ರಾಜ್ಯ ರಮಾರಮಣ ಎಂದು ಪ್ರಸಿದ್ಧಿಯಾಗಿದ್ದ ರಾಜನಾರು?
2. ಸಿಂಧೂ ನಾಗರಿಕತೆಯ ಅಧ್ಯಯನಕ್ಕೆ ನೆರವಾದ ಎರಡು ಪಟ್ಟಣಗಳು ಯಾವುವು?
3. ಗುಪ್ತರ ಕಾಲವನ್ನು ಏನೆಂದು ಕರೆಯುತ್ತಿದ್ದರು?
4. ಮೂಕನಾಯಕ ಎಂಬ ಪತ್ರಿಕೆಯನ್ನು ಯಾರು ಪ್ರಾರಂಭಿಸಿದ್ದರು?
5. ಕಾನ್ಪುರದಲ್ಲಿ ಬ್ರಿಟಿಷರ ವಿರುದ್ಧ ಸಿಡಿದೆದ್ದ ನಾಯಕ ಯಾರಾಗಿದ್ದರು?

## ಜ್ಞಾನ ವಿಜ್ಞಾನ

1. ನಮ್ಮ ಭಾರತದ ರಾಷ್ಟ್ರೀಯ ಪಕ್ಷಿ ಯಾವುದು?
2. ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್.ಎಸ್.ಎಸ್) ಸ್ಥಾಪಕರು ಯಾರು?
3. ವಾತಾವರಣದಲ್ಲಿ ಎಷ್ಟು ಶೇಕಡಾಂಶ ಆಮ್ಲಜನಕವಿದೆ?
4. ಭೂಮಿಯಿಂದ ಚಂದ್ರನಿಗಿರುವ ದೂರ ಎಷ್ಟು?
5. ಭೂಮಿಯ ಸುತ್ತಳತೆಯ ಬಗ್ಗೆ ನಿಖರ ಮಾಹಿತಿಯನ್ನು ನೀಡಿದ ಭಾರತೀಯ ಯಾರು?

## ಮಾರ್ಚ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಬಾಲಗಂಗಾಧರ ತಿಲಕ್
2. ವೀರಮಾತಾ ಜೀಜಾಬಾಯಿ
3. ಉಜ್ಜಯಿನಿ
4. ರಾಷ್ಟ್ರಪತಿ
5. ಗಂಗಾಧರ ರಾವ್ ದೇಶಪಾಂಡೆ

**ಜ್ಞಾನ–ವಿಜ್ಞಾನ – ಉತ್ತರಗಳು**

1. ಆಲಮಟ್ಟಿ
2. ದಕ್ಷಿಣ ಕನ್ನಡ
3. ಶಕುಂತಲಾದೇವಿ
4. ಡಾ॥ ಎಂ.ಸಿ ಮೋದಿ
5. ಸೋಡಿಯಂ, ಕ್ಲೋರಿನ್

**ಅವಿದ್ಯಾಬಂಧದಿಂದ ಬಿಡುಗಡೆ ಮಾಡಲು ತನ್ನನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. – ಶಂಕರಾಚಾರ್ಯ**

# ವಿವಿಧೆಡೆಗಳಲ್ಲಿ ನಡೆದ ಕಾರ್ಯಕ್ರಮ

## ಗುಣಾತ್ಮಕ ಶಿಕ್ಷಣಕ್ಕೆ ಶಿಕ್ಷಕರ ಪಾತ್ರ ಮುಖ್ಯ



ಗುಣಾತ್ಮಕ ಶಿಕ್ಷಣಕ್ಕಾಗಿ ಇಲಾಖೆಯ ಉನ್ನತ ಅಧಿಕಾರಿಗಳು ಯೋಜನೆಗಳನ್ನು ರೂಪಿಸಬಹುದು ಆದರೆ ಅವುಗಳನ್ನು ಕಾರ್ಯರೂಪಕ್ಕೆ ತಂದು ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಅನುಭವಿ ಶಿಕ್ಷಕರ ಪಾತ್ರ ಮುಖ್ಯವಾಗುತ್ತದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತರಾದ ಗರಿಮಾ ಪಂವಾರ್ ಹೇಳಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಿಂದ ಇಲ್ಲಿಯ ಆರ್.ಜೆ ಪಿಯು ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಫೋನ್ ಇನ್ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳ ಅಭಿನಂದನಾ ಹಾಗೂ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಲ್ಲಿರುವ ಸಂಪನ್ಮೂಲ ಶಿಕ್ಷಕರು ಅನುಭವದಲ್ಲಿ ನನಗಿಂತ ಹಿರಿಯರು ಅನುಭವಸ್ಥರು. ತಾವು ಶಾಲಾ ಅವಧಿಯ ನಂತರ ತಮ್ಮ ವೈಯ್ಯಕ್ತಿಕ ಜೀವನಕ್ಕೆ ನೀಡುವ ಸಮಯವನ್ನು ಎಸ್‌ಎಸ್‌ಎಲ್‌ಸಿ ಮಕ್ಕಳ ಫಲಿತಾಂಶ ಸುಧಾರಣೆಗೆ ಸದ್ಬಳಕೆ ಮಾಡಿ, ಶ್ರಮಿಸುತ್ತಿರುವುದು ಶ್ಲಾಘನೀಯ ಎಂದು ಪಂವಾರ್ ನುಡಿದರು.

ಕೆಆರ್‌ಎಂಎಸ್‌ಎಸ್‌ನ ವಿಭಾಗ ಪ್ರಮುಖ ಮಹೇಶ ಬಸರಕೋಡ್ ಮಾತನಾಡಿ, “ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ, ಶಿಕ್ಷಣದ ಹಿತಕ್ಕಾಗಿ ಶಿಕ್ಷಕ, ಶಿಕ್ಷಕರ ಹಿತಕ್ಕಾಗಿ ಸಮಾಜ” ಎಂಬ ಧ್ಯೇಯವನ್ನು ಇಟ್ಟುಕೊಂಡು ಶಿಕ್ಷಕ ಸಂಘಟನೆ ಕೆಲಸ ಮಾಡುತ್ತಿದ್ದು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಸತತ ಮೂರು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳಕ್ಕಾಗಿ ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಎನ್‌ಇಪಿ 2020 ಅನುಷ್ಠಾನ ಸಮಿತಿ ಸದಸ್ಯರಾದ ಚಿದಾನಂದ ಪಾಟೀಲ್ ಮಾತನಾಡಿದರು.

ವೇದಿಕೆ ಮೇಲೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಅಶೋಕ್ ಭಜಂತ್ರಿ, ಡಯಟ್ ಪ್ರಾಂಶುಪಾಲರಾದ ಅಂದಾನಪ್ಪ ವಡಗೇರಿ, ಆಯುಕ್ತರ ಕಚೇರಿಯ ಹಿರಿಯ ಸಹಾಯಕ ನಿರ್ದೇಶಕ ಚೆನ್ನಬಸಪ್ಪ ಮುಧೋಳ, ಡಿವೈಪಿಸಿಸಿ ಬಿ ಪಾಟೀಲ್, ಎಸ್‌ಎಸ್‌ಎಲ್‌ಸಿ ನೋಡಲ್ ಅಧಿಕಾರಿ ರಮೇಶ ಜಾನಕರ್, ಕೆ ಬಸವರಾಜ, ಸದಾನಂದ ಜೋಶಿ, ಕ್ಷೇತ್ರ ಶಿಕ್ಷಣಾಧಿಕಾರಿ ವೀರಣ್ಣ ಬೊಮ್ಮನಳ್ಳಿ, ಆರ್.ಜೆ ಪಿಯು ಕಾಲೇಜಿನ ಪ್ರಾಂಶುಪಾಲ ಡಾ॥ ಪ್ರಹ್ಲಾದ ಭುರ್ಲಿ, ಚಂದ್ರಕಾಂತಬಿರಾದಾರ್, ರವಿ ಹೂಗಾರ, ಅಣ್ಣಾರಾಯ ಬಿರಾದಾರ,

## ಆಂಗ್ಲ ಭಾಷೆ ಪಾಸಿಂಗ್ ಪ್ಯಾಕೇಜ್ ಕಾರ್ಯಕ್ರಮ

ದಿನಾಂಕ 30–03–2022 ರಂದು ಮಾಧ್ಯಮಿಕ ಶಿಕ್ಷಕ ಸಂಘ, ಸರ್ಕಾರಿ ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ಸಂಘ ಹರಪನಹಳ್ಳಿ ತಾಲೂಕು ಘಟಕದ ಆಶ್ರಯದಲ್ಲಿ ನಡೆದ ಪಿಯುಸಿ ಮಕ್ಕಳಿಗೆ ಒಂದು ದಿನದ ಆಂಗ್ಲ ಭಾಷೆಯ ಬಗ್ಗೆ ಪಾಸಿಂಗ್ ಪ್ಯಾಕೇಜ್ ಕಾರ್ಯಕ್ರಮದಲ್ಲಿ 350 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಬಂಗಿ ಬಸಪ್ಪ ಕಾಲೇಜ್, ಹರಪನಳ್ಳಿಯ ಶ್ರೀ ಅರುಣ್ ಕುಮಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಆರ್ ಕೊಟ್ರಪ್ಪ, ರಾಜ್ಯ ಉಪಾಧ್ಯಕ್ಷರು ಕರಾಮಾಶಿ ಸಂಘ, ಭಾಗವಹಿಸಿದ್ದರು. ಶ್ರೀ ಬಿ ಚನ್ನಬಸಪ್ಪ ಅಧ್ಯಕ್ಷರು, ಹರಪನಹಳ್ಳಿ ತಾಲೂಕು ಉಪನ್ಯಾಸಕರ ಸಂಘ ಹಾಗು ಇನ್ನಿತರ ಶಿಕ್ಷಕರು ಭಾಗವಹಿಸಿದ್ದರು.

## ಆಂಗ್ಲ ಭಾಷೆ ತರಬೇತಿ ಕಾರ್ಯಕ್ರಮ

ದಿನಾಂಕ 25.3.2022 ರಂದು ಮಾಧ್ಯಮಿಕ ಶಿಕ್ಷಕ ಸಂಘ ಹಾಗು ವಿ ವಿ ಸಂಘದ ವಿಜಯನಗರ ಮಹಾವಿದ್ಯಾಲಯ ಕಾಲೇಜ್, ಮುನಿರಾಬಾದ, ಕೊಪ್ಪಳ ಜಿಲ್ಲೆಯಲ್ಲಿ ಪಿಯುಸಿ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ವಿಷಯದ ಬಗ್ಗೆ ತರಬೇತಿ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಅನ್ನು ಬಹಳ ಸುಲಭವಾಗಿ ಅರ್ಥವಾಗುವಂತೆ ತಿಳಿಸಲಾಯಿತು. ವೇದಿಕೆಯಲ್ಲಿ ಪ್ರಾಂಶುಪಾಲರಾದ ಶ್ರೀ ಬಸವರಾಜ, ಕ.ರಾ.ಮಾ.ಶಿ.ಸಂಘದ ಉಪಾಧ್ಯಕ್ಷರಾದ ಶ್ರೀ ಕೊಟ್ರಪ್ಪ ಆರ್, ರವಿ, ವೀರೇಂದ್ರ, ಮಾತಾಜಿ, ಗುರೂಜಿ ಉಪಸ್ಥಿತರಿದ್ದರು. ಶ್ರೀ ಜಂಬುನಾಥ ವೂಗ್ಗ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಒಟ್ಟು 75 ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದರು.

## ಹಿಂದಿ ವಿಷಯದ ತ್ರಿಭಾಷಾ ಸೂತ್ರ ಅಳವಡಿಕೆ



NEP 2020 TASK FORCE ಚೇರ್ಮನ್‌ರಾದ ಶ್ರೀ ಮದನಗೋಪಾಲ್ ರವರನ್ನು ಮಧ್ಯಮಿಕ್ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಚಿದಾನಂದ ಪಾಟೀಲ್ ಅವರ ಜೊತೆ ಭೇಟಿಯಾಗಿ ಹಿಂದಿ ವಿಷಯದ ತ್ರಿಭಾಷಾ ಸೂತ್ರದ ಬಗ್ಗೆ ವಿಚಾರಿಸಿದಾಗ ಒಂದನೇ ತರಗತಿಯಿಂದ ತ್ರಿಭಾಷಾ ಸೂತ್ರ ಅಳವಡಿಸಲು ಪೊಸಿಶನ್ ಪೇಪರ್‌ನಲ್ಲಿ ಸೂಚಿಸಲಾಗಿದೆ ಎಂದು ಹೇಳಿದರು. ಈ ವಿಷಯ ಹಿಂದಿ ಶಿಕ್ಷಕರಿಗೆ ಅತೀವ ಸಂತೋಷವನ್ನು ತಂದಿದೆ ಹಿಂದಿ ಶಿಕ್ಷಕ ಸಂಘದ ಪರವಾಗಿ ಮಾನ್ಯರಿಗೆ ಧನ್ಯವಾದಗಳು.




ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಮತ್ತು ರಾಜ್ಯ ಪದಾಧಿಕಾರಿಗಳು ಕಲಿಕಾ ಚೇತರಿಕೆ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.



ಎಂ.ಎಸ್. ಮೋಹನ್,
ನಿವೃತ್ತ ವಿಜ್ಞಾನಿ, DRFL
ಮೈಸೂರು



ಅನುವಾದ :
ಪ್ರೊ॥ ಎನ್. ನಾಗರಾಜು

ಫೆಬ್ರವರಿ ತಿಂಗಳಿನಲ್ಲಿ ಪ್ರಕಟವಾಗಿದ್ದ ರಕ್ಷಣಾ ಆಹಾರ ಸಂಶೋಧನಾಲಯ (DRDO-DRFL) ಮೈಸೂರು ಎಂಬ ಲೇಖನದಲ್ಲಿ ಲೇಖಕರು ಮತ್ತು ಅನುವಾದಕರ ಹೆಸರು ವ್ಯತ್ಯಾಸ ಆಗಿ ಪ್ರಕಟವಾಗಿತ್ತು.
ಈಗ ಸರಿ ಪಡಿಸಿ ಪ್ರಕಟಿಸಲಾಗಿದೆ.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-04-2022 Date of Posting 20th or 21st of every month Posted at Periodical Rate

# ಯುಗಾದಿ ದಿನದರ್ಶಿಕೆ ಲೋಕಾರ್ಪಣೆ ಹಾಗೂ ಫೋನ್‌ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ಶಿಕ್ಷಕರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ





ದಿನಾಂಕ 14–04–2022ರ ಗುರುವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳ ವತಿಯಿಂದ ಸಂಘದ ಕೇಂದ್ರ ಕಛೇರಿ ಯಾದವಸ್ಮೃತಿಯಲ್ಲಿ ಹಮ್ಮಿಕೊಂಡಿದ್ದ ಯುಗಾದಿ ದಿನದರ್ಶಿಕೆ ಲೋಕಾರ್ಪಣೆ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಫೋನ್‌ಇನ್‌ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ಶಿಕ್ಷಕರಿಗೆ ಗೌರವ ಸಮರ್ಪಣೆ ಕಾರ್ಯಕ್ರಮವು ಉತ್ತರಜಿಲ್ಲಾ ಖಜಾಂಚಿಗಳಾದ ಶ್ರೀ ಹರಿದಾಸ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಶ್ರೀಯುತ ಸುರೇಂದ್ರ, ಅಧ್ಯಕ್ಷರು, ಕ.ರಾ.ಮಾ.ಶಿ.ಸ ಬೆಂಗಳೂರು ದಕ್ಷಿಣ ಜಿಲ್ಲೆ ಇವರು ಎಲ್ಲರಿಗೂ ಸ್ವಾಗತವನ್ನು ಕೋರಿದರು. ಶ್ರೀ ಜೆ.ಎಂಜೋಷಿ, ರಾಜ್ಯಕೋಶಾಧ್ಯಕ್ಷರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಯುತ ಸಪ್ತಗಿರಿಗೌಡರು, ಸಮಾಜ ಸೇವಕರು ಹಾಗೂ ಬೆಂಗಳೂರು ಕೇಂದ್ರದ ಭಾ.ಜ.ಪ ಪ್ರಮುಖರು ಯುಗಾದಿ ದಿನದರ್ಶಿಕೆಯನ್ನು ಲೋಕಾರ್ಪಣೆ ಮಾಡಿ, ಫೋನ್‌ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ಶಿಕ್ಷಕರನ್ನು ಸನ್ಮಾನಿಸಿ ಶಿಕ್ಷಣದ ಮಹತ್ವ ಮತ್ತು ಸನಾತನವಾಗಿ ಆಚರಿಸಿಕೊಳ್ಳುತ್ತಿರುವ ಸಂಸ್ಕೃತಿಯ ಬಗ್ಗೆ ತಿಳಿಸಿದರು. ಸಂಪನ್ಮೂಲ ಶಿಕ್ಷಕರಾದ ಶ್ರೀ ಎಸ್.ವಿ. ರಮೇಶ ಹಾಗೂ ಶ್ರೀ ಚನ್ನಕೃಷ್ಣಪ್ಪರವರು ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲರು ಫೋನ್‌ಇನ್ ಕಾರ್ಯಕ್ರಮವು ಇಡೀ ಕರ್ನಾಟಕ ರಾಜ್ಯದಲ್ಲಿ ಯಶಸ್ಸನ್ನು ಕಂಡಿದೆ ಎಂದು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಗಂಗಪ್ಪರವರು ವಂದನಾರ್ಪಣೆ ಮಾಡಿದರು. ಕ.ರಾ.ಮಾ.ಶಿ ಸಂಘದ ಬೆಂಗಳೂರು ಉತ್ತರ ವಲಯ–3ರ ಕಾರ್ಯದರ್ಶಿಗಳಾದ ಶ್ರೀ ಎಂ.ವಿ. ಗಂಗಾಧರರವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಬೆಂಗಳೂರು ಉತ್ತರಜಿಲ್ಲೆಯ ಮಹಿಳಾ ಪ್ರಮುಖರಾದ ಶ್ರೀಮತಿ ಸೀತಾಭಟ್ಟರವರ ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

– ಶ್ರೀ ಎಂ. ವಿ ಗಂಗಾಧರ್, ಕಾರ್ಯದರ್ಶಿ, ಉತ್ತರವಲಯ–3, ಕ.ರಾ.ಮಾ.ಶಿ ಸಂಘ ಬೆಂಗಳೂರು

**ಗಮನಿಸಿ**

**ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ akss1950@gmail.com Emailಗೆ ಕಳುಹಿಸಿಕೊಡಿ. ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com